# ಗುಣಮಟ್ಟದ ವ್ಯಾಪಾರಿ

ಕುಲ್‌ದೀಪ್ ಗರ್ಗ್

---

*ಪ್ರಸಕ್ತ ಸನ್ನಿವೇಶದಲ್ಲಿ ಪ್ರತಿ ಕ್ಷೇತ್ರದಲ್ಲೂ ಗುಣಮಟ್ಟವು ಒಂದು ಪ್ರಮುಖ ವಿಷಯವಾಗಿದೆ. ಹಾಗಾದರೆ ಗುಣಮಟ್ಟದ ಮಹತ್ವವೇನು? ಪ್ರತಿ ಕ್ಷೇತ್ರಕ್ಕೂ ಗುಣಮಟ್ಟದ ಮಾನದಂಡ ಮತ್ತು ಮಹತ್ವವು ಒಂದೇ ಆಗಿರುತ್ತದೆಯೇ ಅಥವಾ ಕ್ಷೇತ್ರಕ್ಕನುಗುಣವಾಗಿ ಅದರಲ್ಲಿ ವ್ಯತ್ಯಾಸಗಳಿರುತ್ತದೆಯೇ? ಸಾಮಾನ್ಯವಾಗಿ ಇಂಥ ಪ್ರಶ್ನೆಗಳ ಕುರಿತಾಗಿ ವಿಚಾರ ಮಾಡಲಾಗುವುದಿಲ್ಲ. ಆದರೆ ಈ ಲೇಖನವು ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಗುಣಮಟ್ಟವನ್ನು ನಿರ್ಧರಿಸಲು ಉದ್ಯಮ ಜಗತ್ತು ಪರಿಗಣಿಸುವ ಮಾನದಂಡಗಳ ಹಿನ್ನೆಲೆಯಲ್ಲಿನ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ. ಉದ್ಯಮದಲ್ಲಿ ಯಾವ ಆಧಾರದ ಮೇಲೆ ಗುಣಮಟ್ಟದ ಮಾನದಂಡಗಳನ್ನು ನಿರ್ಣಯಿಸಲಾಗುತ್ತದೋ ಅದೇ ಆಧಾರದಲ್ಲಿ ಶಿಕ್ಷಣದ ಗುಣಮಟ್ಟವನ್ನು ನಿರ್ಣಯಿಸುವಲ್ಲಿ ಯಾವ ಸಮಸ್ಯೆಗಳು ಎದುರಾಗಬಹುದು ಎಂಬುದರ ಬಗ್ಗೆ ಸಂಭಾಷಣೆಯ ಶೈಲಿಯಲ್ಲಿ ನಿರೂಪಿಸಲಾಗಿರುವ ಈ ಲೇಖನವು ಬೆಳಕು ಚೆಲ್ಲುತ್ತದೆ. ಸಂ.*

---

**ತೌಸೀಫ್:** ಅದು ಕಳೆದ ವರ್ಷದ ಸಂಗತಿ. ಒಂದಿಷ್ಟು ಚಳಿಯ ವಾತಾವರಣವಿತ್ತು, ಸಂಜೆಯ ಸಮಯ. ನಾನು ಮನೆಯ ಕಡೆಗೆ ಹೆಜ್ಜೆ ಹಾಕುತ್ತಿದ್ದೆ. ಅಷ್ಟರಲ್ಲಿ ಎದುರಿನಿಂದ ರಾಮಸ್ವರೂಪ್‌ಜಿ ಆಗಮಿಸುತ್ತಿರುವುದನ್ನು ಗಮನಿಸಿದೆ. ರಾಮಸ್ವರೂಪ್ ಅವರು ಶಿಕ್ಷಕರಾಗಿದ್ದವರು. ಚಿಂತನಶೀಲ ಹಾಗೂ ಶಿಕ್ಷಣದ ಬೆಳವಣಿಗೆಗಳ ಮೇಲೆ ನಿರಂತರವಾಗಿ ತೀಕ್ಷ್ಣ ನೋಟವನ್ನು ಇರಿಸಿಕೊಂಡ ವ್ಯಕ್ತಿ. "ತತ್ವಶಾಸ್ತ್ರವನ್ನು ಕೇವಲ ಓದುವುದಲ್ಲ, ಅದರ ದರ್ಶನ ಮಾಡಬೇಕು. ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ನಿಮ್ಮದಾಗಿಸಿಕೊಳ್ಳಬೇಕು" ಎನ್ನುವುದು ಅವರ ಮಾತು. ಕಳೆದ ವರ್ಷ ಇಲ್ಲೇ ವಾಕಿಂಗ್ ಮಾಡುವ ಸಂದರ್ಭದಲ್ಲಿ ನಾನು ಮತ್ತು ಅವರು ಪರಸ್ಪರ ಭೇಟಿಯಾಗಿದ್ದೆವು. ಆಗಿನಿಂದ ನಾವು ಅನೇಕ ಬಾರಿ ಭೇಟಿಯಾಗಿರುವುದಲ್ಲದೆ, ನಮ್ಮ ದಿನನಿತ್ಯದ ಹೋರಾಟಗಳು, ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಮತ್ತಿತರ ಹಲವಾರು ವಿಷಯಗಳ ಬಗ್ಗೆ ಚರ್ಚಿಸಿದ್ದೇವೆ ಹಾಗೂ ಮಾತನಾಡಿದ್ದೇವೆ.

**ರಾಮಸ್ವರೂಪಜೀ:** ಅರೆ ತೌಸಿಫ್ ಭಾಯ್, ಎಲ್ಲಿ ಬಹಳ ದಿನಗಳ ಬಳಿಕ ಕಾಣಿಸಿಕೊಳ್ಳುತ್ತಿದ್ದೀರಲ್ಲ?

**ತೌಸೀಫ್:** ನಮಸ್ಕಾರ, ನೀವು ಹೇಗಿದ್ದೀರಾ? ಹೌದು, ನಾನು ನನ್ನ ಕಚೇರಿಯ ಕೆಲಸಕ್ಕಾಗಿ ಹೊರಗೆ ಹೋಗಿದ್ದೆ.

**ರಾಮಸ್ವರೂಪಜೀ:** ಓ ಇದಾ ಸಮಾಚಾರ. ಸರಿ ಸರಿ, ಈಗ ಹೇಳಿ, ಹೇಗಿದೆ ಜೀವನ?

**ತೌಸೀಫ್:** ನಿಜಕ್ಕೂ ಚೆನ್ನಾಗಿದೆ! ಹೀಗೇ ನಡೆಯುತ್ತಾ ನಾನು ಅಶ್ರಫ್‌ನನ್ನು ಶಾಲೆಗೆ ಸೇರಿಸುವ ಬಗ್ಗೆ ಯೋಚಿಸುತ್ತಿದ್ದೆ. ಅವನನ್ನು ಸೇರಿಸುವುದಾದರೆ ಯಾವ ಶಾಲೆಗೆ ಸೇರಿಸಬೇಕು? ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡಬಲ್ಲ ಯಾವುದಾದರೂ ಶಾಲೆ ನಿಮ್ಮ ಗಮನದಲ್ಲಿದೆಯೇ?

**ರಾಮಸ್ವರೂಪಜೀ:** ತೌಸಿಫ್ ಭಾಯ್, ನೀವು ಯಾವಾಗಿನಿಂದ ಈ "ಗುಣಮಟ್ಟ"ದ ಬಲೆಗೆ ಬಿದ್ದಿರುವಿರಿ?

**ತೌಸೀಫ್:** ಅಂದರೆ...

**ರಾಮಸ್ವರೂಪಜೀ:** ಅಂದರೆ... ಈಗೀಗ ಎಲ್ಲ ಜನರೂ ಈ "ಗುಣಮಟ್ಟ"ದ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ಕೈಗೆ ಯಾವುದೋ ಮಾಂತ್ರಿಕ ವಸ್ತು ಸಿಕ್ಕಿದೆಯೇನೋ ಎಂಬಂತೆ, ಎಲ್ಲರೂ "ಗುಣಮಟ್ಟದ ಶಿಕ್ಷಣ", "ಗುಣಮಟ್ಟದ ಆಸ್ಪತ್ರೆ", "ಗುಣಮಟ್ಟದ ಸೇವೆ" ಇತ್ಯಾದಿಗಳ ಗುಣಗಾನ ಮಾಡುವವರೇ. ಅಲ್ಲ ಕಣ್ರೀ, ಈ ಪದವನ್ನು ಎಲ್ಲಿ, ಹೇಗೆ, ಏಕೆಲ್ಲಾ ಬಳಸಲಾಗುತ್ತಿದೆ ಎನ್ನುವುದೇ ತಿಳಿಯುತ್ತಿಲ್ಲ, ಅಷ್ಟಕ್ಕೂ ಹಾಗಂದರೇನು? ಅದರ

ಅರ್ಥ ಅಥವಾ ಮೌಲ್ಯ ಏನು? ನನಗೆ ಗೊತ್ತಿರುವ ಪ್ರಕಾರ, ಜನಸಾಮಾನ್ಯರ ಮನಸ್ಸಿನಲ್ಲಿ ಆ ಬಗ್ಗೆ ಸ್ಪಷ್ಟವಾದ ವ್ಯಾಖ್ಯಾನವಾಗಲಿ ಚಿತ್ರಣವಾಗಲಿ ಇರುವಂತೆ ಕಾಣಿಸುತ್ತಿಲ್ಲ.

**ತೌಸೀಫ್:** ನಿಜ, ನಿಜ. ಬನ್ನಿ... ಅಲ್ಲಿರುವ ಚಹಾ ಅಂಗಡಿಯಲ್ಲಿ ಕುಳಿತುಕೊಂಡು ಒಂದು ಕಪ್ ಚಹಾ ಕುಡಿಯುತ್ತಾ ಆ ಬಗ್ಗೆ ಮಾತನಾಡೋಣ.

**ರಾಮಸ್ವರೂಪಜೀ:** ಅದೂ ಸರಿಯೆನ್ನಿ... ನಿಮ್ಮ ಜೊತೆ ಚಹಾ ಸೇವಿಸಿ ಬಹಳ ದಿನಗಳಾಯ್ತು, ನಡೀರಿ.

(ಇಬ್ಬರೂ ಚಹಾದಂಗಡಿಯಲ್ಲಿ ಕುಳಿತು ಚಹಾ ಕುಡಿಯುತ್ತಾ)

**ತೌಸೀಫ್:** ಸರಿ, ನಾನು ತಿಳಿದುಕೊಂಡಿರುವುದನ್ನು ನಿಮಗೆ ವಿವರಿಸುತ್ತೇನೆ. ಈ ಚಹಾದ ಉದಾಹರಣೆಯೊಂದಿಗೆ ಇದನ್ನು ನಾವು ಅರ್ಥಮಾಡಿಕೊಳ್ಳೋಣ. ಈ ಚಹಾದ "ಗುಣಮಟ್ಟ"ವು ಅದು ನಮ್ಮನ್ನು ಸಂತೃಪ್ತಿಗೊಳಿಸುವ ಅಂಶದಲ್ಲಿರುತ್ತದೆ. ಯಾವ ವಸ್ತುವಿನಲ್ಲಿ ಗುಣಮಟ್ಟ ಇರುತ್ತದೋ ಅದು ಮಾತ್ರ ಮಾರುಕಟ್ಟೆಯಲ್ಲಿ ಜಾಗ ಮಾಡಿಕೊಳ್ಳುತ್ತದೆ. ಗ್ರಾಹಕರು ಮಾರುಕಟ್ಟೆಯಲ್ಲಿ ಖರೀದಿಸುವಂಥ ವಸ್ತುಗಳು ಮಾತ್ರ ಬಿಕರಿಯಾಗುತ್ತವೆ ಹಾಗೂ ಗ್ರಾಹಕರು ತಮ್ಮ ಅವಶ್ಯಕತೆಗಳನ್ನು ಪೂರೈಸಿ ಸಂತೃಪ್ತಿಪಡಿಸಬಲ್ಲ ವಸ್ತುಗಳನ್ನು ಮಾತ್ರ ಖರೀದಿಸುತ್ತಾರೆ.

**ರಾಮಸ್ವರೂಪಜೀ:** ಅದ್ಭುತ!!! ಇದರ ಅರ್ಥ ಯಾವುದೇ ವಸ್ತುವು ಚೆನ್ನಾಗಿದೆಯೋ ಕೆಟ್ಟದಾಗಿದೆಯೋ ಎಂಬುದು ಅದರ ಗ್ರಾಹಕರ ಸಂತೃಪ್ತಿಯಿಂದ ನಿರ್ಧರಿತವಾಗುತ್ತದೆ. ಒಂದು ವೇಳೆ ಗ್ರಾಹಕ ಸಂತೃಪ್ತನಾದರೆ ಆ ವಸ್ತು ಚೆನ್ನಾಗಿದೆ; ಇಲ್ಲದಿದ್ದರೆ, ಅದು ಕೆಟ್ಟದಾಗಿದೆ ಅಂತ ತಾನೇ?

**ತೌಸೀಫ್:** ನೀವು ಸಂಪೂರ್ಣ ಸರಿಯಾಗಿ ಗ್ರಹಿಸಿದ್ದೀರಿ. ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ.

**ರಾಮಸ್ವರೂಪಜೀ:** ಅದನ್ನೇ ನಾವು ನಿಜವೆಂದು ಭಾವಿಸಿದರೆ, ಅದರಲ್ಲಿ ಕೆಲವು ಗಂಭೀರ ಸಮಸ್ಯೆಗಳಿವೆ!

**ತೌಸೀಫ್:** ಅದರಲ್ಲಿ ಸಮಸ್ಯೆ ಏನಿದೆ?

**ರಾಮಸ್ವರೂಪಜೀ:** ಮೊದಲನೆಯದಾಗಿ, ಒಂದು ವೇಳೆ ಗ್ರಾಹಕನ ಸಂತೃಪ್ತಿಯೇ ಮಾನದಂಡವಾದರೆ, ವಾಸ್ತವದಲ್ಲಿ ಬೇರೆ ಯಾವುದೇ ಪ್ರಮಾಣಿತ ಮಾನದಂಡವು ಇರುವುದಕ್ಕೇ ಸಾಧ್ಯವಿಲ್ಲ.

**ತೌಸೀಫ್:** ಅಂದರೆ... ನನಗಿದು ಅರ್ಥವಾಗಲಿಲ್ಲ.

**ರಾಮಸ್ವರೂಪಜೀ:** ಸರಿ, ಈಗ ಯಾವುದಾದರೂ ಉದಾಹರಣೆಯನ್ನು ತೆಗೆದುಕೊಳ್ಳೋಣ. ವಿಸ್ಕಿಯ ಉದಾಹರಣೆಯನ್ನು ತೆಗೆದುಕೊಂಡರೆ ಹೇಗೆ? ನನಗೆ ನೆನಪಿರುವ ಹಾಗೆ ವಿಸ್ಕಿಯಲ್ಲಿ ಶೇ. 47 ರಷ್ಟು ಪ್ರಮಾಣದ ಮದ್ಯಸಾರ ಅಂದರೆ ಆಲ್ಕೋಹಾಲ್ ಇರುತ್ತದೆ. ನಾಳೆ ಏನಾದರೂ ಗ್ರಾಹಕರು ಆ ವಿಸ್ಕಿಯಲ್ಲಿ ಶೇ. 50 ರಷ್ಟು ಪ್ರಮಾಣದ ಮದ್ಯಸಾರ ಇದ್ದರೆ ನಮಗೆ ಆನಂದ ನೀಡುತ್ತದೆ ಎಂದು ಹೇಳಬಹುದು. ಇನ್ನು ಕೆಲವು ಗ್ರಾಹಕರಿಗೆ ಆ ಪ್ರಮಾಣ ಶೇ. 60 ಇದ್ದರೆ ಇಷ್ಟ ಆಗಬಹುದು. ಇನ್ನು ಕೆಲವರು ಆ ಪ್ರಮಾಣ ಶೇ. 90 ರಷ್ಟು ಇರಬೇಕೆಂದು ಬಯಸಲೂಬಹುದು. ಈಗ ಏಳುವ ಪ್ರಶ್ನೆಯೆಂದರೆ, ಇದಕ್ಕಾಗಿ ಮಾರುಕಟ್ಟೆಯಲ್ಲಿ ಯಾವುದಾದರೂ ಮಾನದಂಡವನ್ನು ರೂಪಿಸಲು ಸಾಧ್ಯವಿದೆಯೇ ಎನ್ನುವುದು. ಏಕೆಂದರೆ, ಅವರಿಗೆ ಗ್ರಾಹಕನ ಆನಂದವನ್ನು ನೋಡಬೇಕಾಗುತ್ತದೆ. ಹಾಗಾದರೆ ಗ್ರಾಹಕರು ಯಾವ್ಯಾವುದನ್ನೂ ಬಯಸುತ್ತಾರೋ ಆ ಪ್ರಕಾರದ ವಿಸ್ಕಿಯನ್ನು ಅವರು ತಯಾರಿಸಬೇಕಾಗುತ್ತದೆ. ಎರಡನೆಯ ಸಮಸ್ಯೆಯೆಂದರೆ "ಅಪೇಕ್ಷೆ " ಹಾಗೂ "ಅವಶ್ಯಕತೆ" ನಡುವಿನ ವ್ಯತ್ಯಾಸವಿಲ್ಲಿ ಬಹಳ ಅಸ್ಪಷ್ಟವಾಗಿದೆ. ಗ್ರಾಹಕರ "ಅಪೇಕ್ಷೆ " ಏನು ಎಂಬುದು ಮಾತ್ರ ಅತಿಮುಖ್ಯವಾಗಿದೆ. ಆದರೆ, ಆತನಿಗೆ ಅದು "ಅವಶ್ಯಕತೆ" ಕೂಡ ಆಗಿರುವುದೇ ಎಂಬುದು ಕೂಡ ಇಲ್ಲಿ ಏಳುವ ಪ್ರಶ್ನೆಯಾಗಿರುತ್ತದೆ. ಆತ ಏನನ್ನು ಅಪೇಕ್ಷಿಸುತ್ತಿರುವನೋ ಅದು ಆತನ ಅವಶ್ಯಕತೆಯೇ ಆಗಿರದೇ ಇರಲೂಬಹುದಲ್ಲವೇ? ಅಥವಾ ಅದು ಅಪೇಕ್ಷಣೀಯವಲ್ಲದ್ದಿರಬಹುದಲ್ಲವೇ? ಶೇ. 90 ರಷ್ಟು ಪ್ರಮಾಣದ ಮದ್ಯಸಾರ ಇರುವ ವಿಸ್ಕಿ ಸೇವಿಸಲು ಸಿಕ್ಕರೆ ಒಳ್ಳೆಯದು ಎಂದು ನಾನು ಅಪೇಕ್ಷಿಸಬಹುದು. ಆದರೆ ಅದು ಅಪೇಕ್ಷಣೀಯವೇ? ನಾನು ಶೇ. 90 ರಷ್ಟು ಪ್ರಮಾಣದ ಮದ್ಯಸಾರ ಇರುವ ವಿಸ್ಕಿಯನ್ನು ಸೇವಿಸಿದ ನಂತರ ನನ್ನ ಪರಿಸ್ಥಿತಿ ಏನಾಗಬಹುದು? ಮದ್ಯಸಾರದ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳ ಕುರಿತು ತಿಳಿವಳಿಕೆಯನ್ನು ಹೊಂದಿರುವವರು ಸುಲಭವಾಗಿ ಅದನ್ನು ಹೇಳಬಲ್ಲರು. ನನ್ನ ಅಜ್ಞಾನದಿಂದಲೋ ಅಥವಾ ಕೆಟ್ಟ ಅಭ್ಯಾಸದಿಂದಲೋ, ನನಗಾಗಲಿ, ಇಲ್ಲವೇ ನನ್ನ ಆರೋಗ್ಯಕ್ಕಾಗಲಿ ಅಪೇಕ್ಷಣೀಯವಲ್ಲದ ಯಾವುದೋ ವಸ್ತುವಿನ ಬಗ್ಗೆ ನಾನು ಹಂಬಲಿಸುತ್ತಿರುವ ಸಾಧ್ಯತೆಯೂ ಇರಬಹುದಲ್ಲ.

**ತೌಸೀಫ್:** ಅಬ್ಬಾ! ನಿಮ್ಮ ಮಾತು ನನಗೆ ಈಗ ಅರ್ಥವಾಯಿತು. ಪ್ರಾಯಶಃ ನಾವು ಗ್ರಾಹಕರ ಸಂತೃಪ್ತಿಯ ಬದಲಿಗೆ, ಬೇರೆ ಯಾವುದನ್ನಾದರೂ ಮಾನದಂಡವಾಗಿ ಆಧರಿಸಬೇಕಾಗುತ್ತದೆ. ಹಾಗೂ ಆ ವಿಚಾರಗಳ ಬಗ್ಗೆ ನಾವು ಗಮನ ಹರಿಸಿದರೆ, ಬಹುಶಃ ನಾವು ಗ್ರಾಹಕರ ಸಂತೃಪ್ತಿಯನ್ನು ಸ್ವಯಂ ಪಡೆಯಬಹುದು, ಅಲ್ಲವೇ?

**ರಾಮಸ್ವರೂಪಜೀ:** ಈಗಲೂ ನನ್ನ ಮನಸ್ಸಿನಲ್ಲಿ ತುಂಬ ಸ್ಪಷ್ಟತೆಯೇನೂ ಇಲ್ಲ. ನನ್ನ ಸಮಸ್ಯೆಯೆಂದರೆ, ನಮ್ಮೆಲ್ಲರ ಮನಸ್ಸಿನಲ್ಲಿ ಗುಣಮಟ್ಟದ ಅರ್ಥವೇನು? ಮೊದಲು ಅದನ್ನು ತಿಳಿದುಕೊಳ್ಳೋಣ.

**ತೌಸೀಫ್:** ಸರಿ ಹಾಗಾದರೆ. ನಾವು ಒಟ್ಟಿಗೆ ಸೇರಿಕೊಂಡು ವ್ಯಾಖ್ಯಾನಿಸಲು ಪ್ರಯತ್ನಿಸೋಣ. ನಾನೊಬ್ಬ ಇಂಜಿನಿಯರ್ ಆಗಿರುವುದರಿಂದ ನನ್ನ ತಿಳಿವಳಿಕೆಗೆ ಗೋಚರವಾಗುವ ವಿಷಯಗಳನ್ನು ಮಂಡಿಸುತ್ತೇನೆ. ನಾವು ಔದ್ಯೋಗಿಕ ಜಗತ್ತನ್ನು ಪರಿಗಣಿಸಿದಾಗ, ಅಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ ಎಂದು ನಾನು ಭಾವಿಸುತ್ತೇನೆ. ನಾವು ಅಲ್ಲಿ ಏನನ್ನು ತಯಾರಿಸಿದರೂ, ಅದರ ಪ್ರತಿಯೊಂದು ಅಂಶದ ಪ್ರಮಾಣಿತ ವಿವರಗಳನ್ನು ಬಹಳ ಎಚ್ಚರಿಕೆಯಿಂದ ನಾವು ಮುಂಚಿತವಾಗಿ ಸಿದ್ಧಪಡಿಸುಕೊಳ್ಳುತ್ತೇವೆ. ಆ ವಸ್ತುವಿನ ಕಾರ್ಯವೇನು? ಅದು ಈ ಕಾರ್ಯವನ್ನು ನೆರವೇರಿಸಲು ಸಾಧ್ಯವಾಗದಂತಾಗಲು ಅದರ ಭೌತಿಕ ಸ್ವರೂಪ ಹೇಗಿರಬೇಕು? ಅದರ ಉದ್ದ, ಅಗಲ, ಎತ್ತರ, ದಪ್ಪ ಎಷ್ಟಿರಬೇಕು? ಅದರ ವಿನ್ಯಾಸ ಏನಿರಬೇಕು? ಅದನ್ನು ಯಾವ ವಸ್ತುವಿನಿಂದ ತಯಾರಿಸಬೇಕು? ಅದರ ಹೊರ ಮತ್ತು ಒಳ ಮೇಲ್ಮೈಯ ವಿನ್ಯಾಸ ಯಾವ ರೀತಿ ಇರಬೇಕು? ಮುಂತಾದ ಪ್ರಮಾಣಿತ ವಿವರಗಳನ್ನು ಆರಂಭದಲ್ಲೇ ಸಿದ್ಧಪಡಿಸಲಾಗುತ್ತದೆ. ಏಕೆಂದರೆ ಮುಂದೆ ಅದನ್ನು ಅಳೆಯಲು ಹಾಗು ಮಾನದಂಡಗಳನ್ನು ಪರಿಶೀಲಿಸಲು ಇದರಿಂದ ಸಾಧ್ಯವಾಗುತ್ತದೆ. ಹೀಗೆ ಸಂಪೂರ್ಣ ಪ್ರಮಾಣಿತ-ವಿವರಣೆಯನ್ನು ಹೊಂದಿರುವ ಕೈಪಿಡಿಯನ್ನು ರಚಿಸಲಾಗುತ್ತದೆ. ನಂತರ ಈ ಉತ್ಪನ್ನದ ತಯಾರಿಕೆಯ ಪ್ರತಿಯೊಂದು ಹಂತವನ್ನೂ ಗುರುತಿಸಲಾಗುತ್ತದೆ. ಮಾತ್ರವಲ್ಲ, ಅದು ನಿಗದಿತ ಹಂತದವರೆಗಿನ ಹಾಗೂ ಉಳಿದ ಎಲ್ಲ ಮಾನದಂಡಗಳನ್ನು ಸಾಧಿಸಿದೆಯೇ ಎಂದು ಪರಿಶೀಲಿಸಲಾಗುತ್ತದೆ. ಹೀಗೆ ಆ ಉತ್ಪನ್ನವು ಅಂತಿಮ ಹಂತವನ್ನು ತಲುಪುವವರೆಗೂ ಪ್ರತಿಯೊಂದು ಅಂಶವನ್ನೂ ಪರಿಶೀಲನೆ ಮಾಡಲಾಗುತ್ತದೆ.

ಯಾವುದೇ ಹಂತದಲ್ಲಾದರೂ ಏನಾದರೂ ಕೊರತೆ ಇಲ್ಲವೇ ದೋಷ ಕಂಡುಬಂದರೆ, ಅದು ಹೇಗಾಯಿತು ಎಂಬುದನ್ನು ತಿಳಿದುಕೊಳ್ಳಲು ಆ ಹಂತದ ಉತ್ಪಾದನಾ ಪ್ರಕ್ರಿಯೆಗಳು ಅಥವಾ ಇತರೆ ಅಂಶಗಳ ಕುರಿತು ಪರಿಶೀಲನೆ ಮಾಡಲಾಗುತ್ತದೆ.

ಈ ಪ್ರಕಾರದಲ್ಲಿ, ಎಲ್ಲಾ ಹಂತಗಳಲ್ಲೂ ಸರಿಯಾದ ರೀತಿಯಲ್ಲಿ ಉತ್ಪನ್ನವನ್ನು ತಯಾರಿಸುವಲ್ಲಿ ಯಶಸ್ವಿಯಾದಾಗ, ಅದು ಎಲ್ಲಾ ಮಾನದಂಡಗಳನ್ನು ಪೂರೈಸಲು ಸಾಧ್ಯವಾಗುತ್ತದೆ, ಅಷ್ಟಾದ ಮೇಲೆಯೇ ಅವುಗಳನ್ನು ಸ್ವೀಕರಿಸಲಾಗುತ್ತದೆ. ನಾವು ಈ ಪ್ರಕ್ರಿಯೆಯನ್ನು ಗಮನಿಸಿದರೆ, ಇಲ್ಲಿ 'ಗುಣಮಟ್ಟ' ಎಂಬುದು ಉತ್ಪಾದನಾ ಮಾನದಂಡವನ್ನು ಸಾಧಿಸುವಂಥದ್ದಾಗಿದೆ ಹಾಗೂ ಆ ಉತ್ಪನ್ನದ ಮೂಲಕ ಅದರ ಕಾರ್ಯವನ್ನು ನಾವು ಅಪೇಕ್ಷಿಸುವ ರೀತಿಯಲ್ಲಿ ನಿರ್ವಹಿಸುವುದಾಗಿದೆ.

**ರಾಮಸ್ವರೂಪಜೀ:** ನಿಜ ತೌಸೀಫ್ ಭಾಯ್, ನೀವೀಗ ಒಂದಿಷ್ಟು ಸರಿಯಾದ ಅಭಿಪ್ರಾಯವನ್ನೇ ನೀಡಿರುವಿರಿ. ಈಗ ಸ್ವಲ್ಪ ಸ್ವಲ್ಪವಾಗಿ "ಗುಣಮಟ್ಟ"ದ  ಸ್ಪಷ್ಟ ಚಿತ್ರಣವು ರೂಪುಗೊಳ್ಳಲಾರಂಭಿಸಿದೆ.

**ತೌಸೀಫ್:** ನಿಜ!! ಈ ಸಂಪೂರ್ಣ ಪ್ರಕ್ರಿಯೆಯನ್ನು ನಾವು "ಗುಣಮಟ್ಟದ ಖಾತರಿ" ಅಥವಾ "ಗುಣಮಟ್ಟದ ಖಚಿತತೆ" ಎಂದು ಕರೆಯುತ್ತೇವೆ. ಶಾಲೆಯೂ ಕೂಡ ಅದೇ ಪ್ರಕಾರದಲ್ಲಿ “ಗುಣಮಟ್ಟದ ಖಾತರಿ”ಯನ್ನು ಮಾಡಬೇಕು. ನಾನು ನಿಮಗೆ “ಗುಣಮಟ್ಟದ ಶಾಲೆ”ಯ ಕುರಿತು ಕೇಳಿದಾಗ ಹೆಚ್ಚುಕಡಿಮೆ ಇದೇ ಅರ್ಥದಲ್ಲಿ ನಿಮ್ಮನ್ನು ಆ ಬಗ್ಗೆ ಕೇಳಿದ್ದೆ. ಆದ್ದರಿಂದ ಶಾಲೆಯ ಗುಣಮಟ್ಟ ಇಲ್ಲವೇ ಶಿಕ್ಷಣದ ಗುಣಮಟ್ಟ ಅಂದರೆ ಇಲ್ಲಿ ಶಿಕ್ಷಣದ ಪ್ರಕ್ರಿಯೆ-ಪ್ರಮಾಣಗಳು ಎಂದರ್ಥ. ಇಲ್ಲಿ ನಾವು ಯಾವುದೇ ಉತ್ಪನ್ನಗಳನ್ನು ತಯಾರಿಸುತ್ತಿಲ್ಲ. ಬದಲಿಗೆ ಮಗುವಿಗೆ ಶಿಕ್ಷಣ ನೀಡುತ್ತೇವೆ. ಹಾಗಾದರೆ ಶಿಕ್ಷಣಕ್ಕೆ ಯಾವುದಾದರೂ ಮಾನದಂಡಗಳಿವೆಯೇ? ಆ ಮಾನದಂಡಗಳನ್ನು ಸಾಧಿಸುವುದೇ "ಗುಣಮಟ್ಟದ ಶಿಕ್ಷಣ" ಆಗಿರುತ್ತದೆ. ಅದೇ ರೀತಿ ಶಿಕ್ಷಣದ ಪ್ರಕ್ರಿಯೆಯನ್ನು ಒಂದಿಷ್ಟು ಅರ್ಥಪೂರ್ಣ ಹಂತಗಳಲ್ಲಿ ವಿಂಗಡಿಸಬಹುದು ಮತ್ತು ಪ್ರತಿ ಹಂತಕ್ಕೂ ಸೂಕ್ತ ಮಾನದಂಡವನ್ನು ನಿಗದಿಪಡಿಸಬಹುದು. ಹೀಗೆ, ಈ ಹಂತದಲ್ಲಿ ಶೈಕ್ಷಣಿಕ ಪ್ರತಿಕ್ರಿಯೆಗಳು ಆ ಮಾನದಂಡಗಳನ್ನು ಪೂರೈಸುತ್ತಿವೆಯೇ ಇಲ್ಲವೇ ಎಂಬುದನ್ನು ಯಾರು ಬೇಕಾದರೂ ಆ ಮುಖೇನ ನೋಡಲು ಸಾಧ್ಯವಾಗುತ್ತದೆ ಹಾಗೂ...

**ರಾಮಸ್ವರೂಪಜೀ:** ಹಾಗೂ ... ಸ್ವಲ್ಪ ತಡೀರಿ ತೌಸೀಫ್ ಭಾಯ್... ಸ್ವಲ್ಪ ಆರಾಮವಾಗಿ ಮುಂದೆ ಹೋಗಿ. ನೋಡಿ, ನೀವೂ ಕೂಡ ಈ ದಿನಗಳಲ್ಲಿ ಹೆಚ್ಚಿನವರು ಮಾಡುತ್ತಿರುವ ತಪ್ಪನ್ನೇ ಮಾಡುತ್ತಿರುವಿರಿ.

**ತೌಸೀಫ್:** ಇರಬಹುದು. ಆದರೆ ಆ ತಪ್ಪು ಯಾವುದು ಎಂಬುದನ್ನು ಖಂಡಿತವಾಗಿಯೂ ನಾನು ತಿಳಿದುಕೊಳ್ಳಲು ಬಯಸುತ್ತೇನೆ.

**ರಾಮಸ್ವರೂಪಜೀ:** ಖಂಡಿತವಾಗಿಯೂ ನಾನು ನಿಮಗೆ ತಿಳಿಸಿಕೊಡುತ್ತೇನೆ. ಸ್ವಲ್ಪ ತಡೀರಿ. ನಾನು ನಿಮಗೆ ಹೇಳುತ್ತೇನೆ. ಕೆಲವು ಅಂಶಗಳ ಮೂಲಕ ಎಲ್ಲವನ್ನೂ ವಿವರಿಸಲು ಯತ್ನಿಸುತ್ತೇನೆ :

1. ಮೊದಲನೆಯದು, ಈಗ ನೀವು ಮಾಡುತ್ತಿರುವ ಅಥವಾ ಈಗಿನ ದಿನಮಾನಗಳಲ್ಲಿ ನಮ್ಮ ಸಮಾಜದ ಹೆಚ್ಚಿನ ಜನರು ಮಾಡುತ್ತಿರುವ ತಪ್ಪು ಏನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಸಲಿಗೆ, ತಪ್ಪು ಏನೆಂದರೆ, ವಸ್ತುಗಳ ಅರ್ಥಗಳು ಅಥವಾ ವ್ಯಾಖ್ಯಾನಗಳು ಅವುಗಳ ಸಂದರ್ಭಗಳಿಗೆ ಸಂಬಂಧಿಸಿರುತ್ತವೆ ಎಂಬುದನ್ನು ನಾವು ಮರೆತುಬಿಡುವುದು. ಒಂದು ಸಂದರ್ಭದಲ್ಲಿ ಮಾನ್ಯವಾಗಿರುವ ವ್ಯಾಖ್ಯಾನವು ಇನ್ನೊಂದು ಸಂದರ್ಭದಲ್ಲೂ ಕೂಡ ಮಾನ್ಯವಾಗಲೇ ಬೇಕು ಎಂದೇನಿಲ್ಲ. ಇದು ನಮ್ಮೊಂದಿಗೂ ಕೂಡ ಸಂಭವಿಸಿದೆ. ನಾವು ಔದ್ಯೋಗಿಕ ಜಗತ್ತಿನಲ್ಲಿ ಅನ್ವಯವಾಗುವಂಥ 'ಗುಣಮಟ್ಟ'ದ ವ್ಯಾಖ್ಯಾನವನ್ನು ನಮ್ಮ ದೈನಂದಿನ ಭಾಷೆಯ ಭಾಗವಾಗಿ ರೂಢಿಸಿಕೊಂಡಿದ್ದೇವೆ. ಔದ್ಯೋಗಿಕ ಜಗತ್ತಿನ ಪದಕೋಶವು ನಮ್ಮ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದರೆ ನಾವು ಅದನ್ನು ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಬಳಸಲು ಪ್ರಾರಂಭಿಸಿಬಿಟ್ಟಿದ್ದೇವೆ. ಕೆಲವೊಮ್ಮೆ ಆ ಪದದ ಅರ್ಥವು ಇಲ್ಲಿ ಅನರ್ಥವನ್ನು ಉಂಟುಮಾಡುವುದೂ ಉಂಟು! ಔದ್ಯೋಗಿಕ ಜಗತ್ತಿನಲ್ಲಿ ಗುಣಮಟ್ಟ ಎಂಬುದಕ್ಕೆ ತುಂಬ ಸೀಮಿತವಾದ ಅರ್ಥವ್ಯಾಖ್ಯಾನವಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಔದ್ಯೋಗಿಕ ಜಗತ್ತಿನಲ್ಲಿ ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಅದಕ್ಕೆ ಆ ವ್ಯಾಖ್ಯಾನವು ರೂಪುಗೊಂಡಿದೆ. ಹಾಗಂತ, ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅದೇ ಅನ್ವಯವಾಗುತ್ತದೆ ಎಂಬುದು ಅದರ ಅರ್ಥವಲ್ಲ. ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ವ್ಯಾಖ್ಯಾನವು ನಮಗೆ ಬೇಕಾಗಿದೆ.
2. ಔದ್ಯೋಗೀಕರಣ ಎಂಬುದು ಒಂದು ಆಧುನಿಕ ವಿದ್ಯಮಾನವಾಗಿದೆ. ಔದ್ಯೋಗೀಕರಣಕ್ಕೂ ಮುನ್ನ, ಜನರ ಮನಸ್ಸಿನಲ್ಲಿ ವಸ್ತುಗಳು 'ಚೆನ್ನಾಗಿವೆ' ಅಥವಾ 'ಕೆಟ್ಟದಾಗಿವೆ' ಎಂಬ ಅರ್ಥ ಮತ್ತು ಮಾನದಂಡಗಳನ್ನು ಇರಲಿಲ್ಲವೇ? ಖಂಡಿತವಾಗಿಯೂ ಇತ್ತು. ನಿಜ ಹೇಳಬೇಕೆಂದರೆ, 'ಗುಣಮಟ್ಟ' ಎಂಬ ಈ ಔದ್ಯೋಗಿಕ ಪದವು ದಿಢೀರ್ ಆಗಿ ಇಷ್ಟೊಂದು ಜನಪ್ರಿಯವಾಗಿರುವ ಹಿಂದಿನ ಕಾರಣಗಳನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಪ್ರತಿಯೊಂದು ವಸ್ತುವಿನ 'ಸಾಮೂಹಿಕ ಉತ್ಪಾದನೆ' ಅಥವಾ 'ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ' ಇದರ ಹಿಂದಿನ ಅತೀ ದೊಡ್ಡ ಮತ್ತು ಮೂಲಭೂತ ಕಾರಣ ಎಂದು ನಾನು ಭಾವಿಸುತ್ತೇನೆ. ಸರಕುಗಳನ್ನು ಮಾತ್ರ ನಾವು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುತ್ತಿಲ್ಲ, ಬದಲಿಗೆ ಸೇವೆಗಳನ್ನು (ಆರೋಗ್ಯ, ಶಿಕ್ಷಣ, ಸುರಕ್ಷತೆ ಇತ್ಯಾದಿ) ಕೂಡ ದೊಡ್ಡ ಪ್ರಮಾಣದಲ್ಲಿ ಒದಗಿಸುವ ಸನ್ನಿವೇಶವು ಸೃಷ್ಟಿಯಾಗಿದೆ. ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂದರೆ ಇತಿಹಾಸದಲ್ಲಿ ಹಿಂದೆಂದೂ ಇಷ್ಟೊಂದು ಪ್ರಮಾಣದಲ್ಲಿ ಪೂರೈಸಿರಲಾರದಷ್ಟು. ಕೈಗಾರಿಕೆಯ ಯಶಸ್ಸಿನಿಂದ ನಾವು ಎಷ್ಟೊಂದು ಪ್ರಭಾವಿತರಾಗಿದ್ದೇವೆ ಎಂದರೆ, ಕೈಗಾರಿಕೆಗಳಲ್ಲಿ ಹೇಗೆ ವಸ್ತುಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಬಹುದಾಗಿದೆಯೋ, ಅದೇ ರೀತಿ ಇತರೆ ವಸ್ತುಗಳ (ಸೇವೆಗಳು ಸೇರಿದಂತೆ) ಗುಣಮಟ್ಟವನ್ನೂ ಖಾತರಿಪಡಿಸಬಹುದಾಗಿದೆ ಎಂದು ನಾವು ಯೋಚಿಸಲು ಪ್ರಾರಂಭಿಸಿಬಿಟ್ಟಿದ್ದೇವೆ. ಇದೊಂದು ಭಯಂಕರ ದೊಡ್ಡ ತಪ್ಪಾಗಿದೆ.
3. ಸ್ವಲ್ಪ ಎಚ್ಚರಿಕೆಯಿಂದ ಯೋಚಿಸುವ ಅಗತ್ಯವಿದೆ. ಕೈಗಾರಿಕೆಗಳಲ್ಲಿ "ಗುಣಮಟ್ಟದ ಖಾತರಿ" ಎನ್ನುವುದು ಒಂದು ತಾಂತ್ರಿಕ ಪ್ರಕ್ರಿಯೆಯಾಗಿದೆ. ಇಲ್ಲಿ 'ಗುಣಮಟ್ಟ' ಕ್ಕೆ ತಾಂತ್ರಿಕ ಅರ್ಥವಿದೆ: ತಾವು ಬಯಸಿದ ಕಾರ್ಯವನ್ನು ಸರಿಯಾಗಿ ನಿರ್ವಹಿಸಲು ಮತ್ತು ಉತ್ಪಾದನಾ ಪ್ರಕ್ರಿಯೆಯ ಮಾನದಂಡಗಳನ್ನು ಪೂರೈಸಲು ಅದರಿಂದ ಸಾಧ್ಯವಾಗುತ್ತದೆ. ಕೈಗಾರಿಕೆಗಳಲ್ಲಿ "ಗುಣಮಟ್ಟದ ಖಾತರಿ" ಯ ಅರ್ಥ ಮತ್ತು ಕಾರ್ಯವಿಧಾನಗಳು ಕ್ರಮೇಣ ವಿಕಸನಗೊಂಡಿರುವುದು ನಾವು ಇತಿಹಾಸವನ್ನು ಕೊಂಚ ಪರಿಶೀಲನೆ ಮಾಡಿದಾಗ ತಿಳಿದು ಬರುತ್ತದೆ ಹಾಗೂ ಅತ್ಯಧಿಕ ಲಾಭವನ್ನು ಗಳಿಸುವುದು ಹೇಗೆ ಎಂಬುದು ಪ್ರಶ್ನೆಯು ಅವುಗಳನ್ನು ನಿರ್ಧರಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿದೆ.

   ಈ ವ್ಯವಹಾರದಿಂದಾಗಿ ನಾವು ಸಾಮಾನ್ಯವಾಗಿ ನಿರ್ಲಕ್ಷಿಸುವಂಥ ಪ್ರಕ್ರಿಯೆಗಳು ಮತ್ತು ಘಟನೆಗಳು ಕೈಗಾರಿಕೋದ್ಯಮಗಳಲ್ಲಿ ಹುಟ್ಟಿಕೊಂಡಿವೆ. ಇಲ್ಲಿ ಲಾಭವು ಒಂದು ದೊಡ್ಡ ಶಕ್ತಿಯಾಗಿರುವುದರಿಂದ, ಕಡಿಮೆ ಸಮಯದಲ್ಲಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡುವುದು ಹೇಗೆ? ಮತ್ತು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು ಹೇಗೆ? ಎಂಬಿತ್ಯಾದಿ ಪ್ರಕ್ರಿಯೆಗಳನ್ನು ಆವಿಷ್ಕರಿಸುವ ಬಗ್ಗೆ ಚಿಂತನೆಗಳು ನಡೆದವು. ಇದರಿಂದಾಗಿಯೇ ಅಗ್ಗವಾಗಿ ಕೆಲಸ ಮಾಡಲು ಒಪ್ಪಿಕೊಳ್ಳಬಲ್ಲ ಅತ್ಯಂತ ಕಡಿಮೆ ನುರಿತರಾಗಿರುವ ಕುಶಲಕರ್ಮಿಗಳಿಗೆ ನಾವು ಆದ್ಯತೆ ನೀಡಲಾರಂಭಿಸಿದೆವು. ಅದಕ್ಕಾಗಿಯೇ ಎಂಥ ಉತ್ಪಾದನಾ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಲಾಯಿತೆಂದರೆ, ಅಲ್ಲಿ ಒಂದು ಉತ್ಪನ್ನವನ್ನು ಅನೇಕ ಸಣ್ಣ ಭಾಗಗಳಾಗಿ ವಿಭಜಿಸಲಾಯಿತು ಮತ್ತು ಪ್ರತಿ ಭಾಗವನ್ನು ಒಬ್ಬರು ಅಥವಾ ಕೆಲವು ಸಾಧಾರಣ

ಕುಶಲಕರ್ಮಿಗಳು ತಯಾರಿಸಿಕೊಡಲಾರಂಭಿಸಿದರು. ಪ್ರತಿಯೊಂದು ಭಾಗದ ವಿನ್ಯಾಸ ಹಾಗೂ ಪ್ರಮಾಣದ ಕೈಪಿಡಿಯನ್ನು ಯಾವ ರೀತಿಯಲ್ಲಿ ರೂಪಿಸಲಾಯಿತೆಂದರೆ, ಕೊನೆಗೆ ಈ ಎಲ್ಲಾ ಭಾಗಗಳ ಸುಲಭ ಜೋಡಣೆ ಮತ್ತು ಒಂದು ಸಂಪೂರ್ಣ ಉತ್ಪನ್ನವನ್ನು ಸಿದ್ಧವಾಗುವಂಥ ಸಂಯೋಜನೆಯನ್ನು ಅದರ ಮೂಲಕವೇ ಖಚಿತಪಡಿಸಿಕೊಳ್ಳಲಾಗುತ್ತದೆ. ಸಣ್ಣ ಸಣ್ಣ ಭಾಗಗಳನ್ನು ತಯಾರಿಸುವುದು ಸುಲಭವಾಗಿರುವುದರಿಂದ ಮತ್ತು ಕಡಿಮೆ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡಬಹುದಾಗಿರುವುದರಿಂದ ಸಣ್ಣ ಭಾಗಗಳಾಗಿ ವಿಭಜಿಸುವುದು ಅವಶ್ಯಕವಾಗಿತ್ತು. ಎರಡನೆಯದಾಗಿ, ಆ ಭಾಗಕ್ಕೆ ನಿಗದಿಮಾಡಲಾದ ಮಾನದಂಡಗಳನ್ನು ತಾವು ಪೂರೈಸಿರುವೆವೇ ಇಲ್ಲವೇ ಎಂದು ತಿಳಿಯಲು ಕುಶಲಕರ್ಮಿಗಳು ಸ್ವತಃ ಕೈಪಿಡಿಯನ್ನು ನೋಡಬಹುದು ಅಥವಾ ಅದರ ನಿಗದಿತ ಮಾನದಂಡಗಳ ಪ್ರಕಾರವೇ ಉತ್ಪಾದನೆಯನ್ನು ಮಾಡಲಾಗುತ್ತಿದೆಯೇ ಇಲ್ಲವೇ ಎಂದು ಸುಲಭವಾಗಿ ನೋಡಲು ಬೇರೆ ಕೆಲವು ಜನರನ್ನು (ಹೆಚ್ಚು ಪರಿಣಿತರಲ್ಲದವರನ್ನು) ನೇಮಿಸಬಹುದು. ಹೀಗೆ ಉತ್ಪಾದನೆಗೆ ತನ್ನದೇ ಆದ ಸಂಪೂರ್ಣ ಅಧಿಕಾರಿ ವರ್ಗವೂ ಕೂಡ ಅಭಿವೃದ್ಧಿಯಾಯಿತು. ಈ ಇಡೀ ಘಟನಾಕ್ರಮದಲ್ಲಿ ವಿಶೇಷವಾದ ಸಂಗತಿಯೊಂದು ನಡೆದಿರುವುದನ್ನು ನಾವು ಗಮನಿಸಬೇಕು. ನೀವು ಕುಶಲಕರ್ಮಿಗಳ ಪರಿಸ್ಥಿತಿಯನ್ನು ನೋಡಿ. ಇಲ್ಲಿ ಕುಶಲಕರ್ಮಿಯು ತಯಾರಿಕೆಯ ಪ್ರಕ್ರಿಯೆಯನ್ನಾಗಲಿ ನಿರ್ಮಾಣದ ಮಾನದಂಡಗಳನ್ನಾಗಲಿ ನಿರ್ಧರಿಸುವುದಿಲ್ಲ. ಇವನ್ನೆಲ್ಲ ಅಭಿವೃದ್ಧಿಪಡಿಸುವಲ್ಲಿ ಇಲ್ಲವೇ ಸರಿಪಡಿಸುವುದರಲ್ಲಿ ಅವರಿಗೆ ಯಾವುದೇ ಪಾತ್ರ ಇರುವುದಿಲ್ಲ. ಏಕೆಂದರೆ ಅದಕ್ಕೆ ಬೇಕಾದ ಕೌಶಲ್ಯ ಮತ್ತು ಜ್ಞಾನವನ್ನು ಅವರು ಹೊಂದಿರುವುದಿಲ್ಲ. ಅದನ್ನೆಲ್ಲ ಈಗ ಬೇರೆಯವರು ನಿರ್ಧರಿಸುತ್ತಾರೆ. ಅದಲ್ಲದೆ, ಈ ಇಡೀ ಪ್ರಕ್ರಿಯೆಯಲ್ಲಿ ಬೌದ್ಧಿಕ ಶ್ರಮ ಮತ್ತು ದೈಹಿಕ ಶ್ರಮವನ್ನು ಕೂಡ ವಿಭಜಿಸಲಾಗಿರುತ್ತದೆ.

4. ಈಗ ಇರುವ ಪ್ರಶ್ನೆಯೆಂದರೆ ಶಿಕ್ಷಣದಲ್ಲೂ ಕೂಡ ನಾವು ಲಾಭವನ್ನು ಕೇಂದ್ರವಾಗಿಟ್ಟುಕೊಂಡು ಈ ಎಲ್ಲಾ ಕಾರ್ಯವಿಧಾನಗಳನ್ನು ನಿರ್ಧರಿಸಬಹುದಾಗಿದೆಯೇ? ಶಿಕ್ಷಣ ಕ್ಷೇತ್ರದಲ್ಲಿ ಕಡಿಮೆ ಕೌಶಲ್ಯ ಮತ್ತು ಕಡಿಮೆ ಸಾಮರ್ಥ್ಯವಿರುವವರು ಶಿಕ್ಷಣ ನೀಡಲು ಸಾಧ್ಯವಿದೆಯೇ? ಅದರ ಪ್ರಕ್ರಿಯೆಗಳನ್ನು ಸಣ್ಣ ಸಣ್ಣ ಭಾಗಗಳಾಗಿ ವಿಭಜಿಸಲು ಶಿಕ್ಷಣದಲ್ಲಿ ಸಾಧ್ಯವಿದೆಯೇ? ಹಾಗೂ ಪ್ರತಿ ಭಾಗಕ್ಕೂ ಮಾನದಂಡಗಳನ್ನು ನಿಗದಿಪಡಿಸಲು ಮತ್ತು ಅವುಗಳ ಕೈಪಿಡಿಗಳನ್ನು ಸಿದ್ಧಪಡಿಸಲು ಸಾಧ್ಯವಿದೆಯೇ? ಶಿಕ್ಷಣದಲ್ಲಿ ಬೌದ್ಧಿಕ ಶ್ರಮವನ್ನು ಬೇರಯವರು ಮತ್ತು ದೈಹಿಕ ಶ್ರಮವನ್ನು ಬೇರೆಯವರು ಹೀಗೆಲ್ಲ ಮಾಡಲು ಸಾಧ್ಯವಿದೆಯೇ? ಅಂತಹ ಯಾವುದೇ ವ್ಯಕ್ತಿಯನ್ನು ನಾವು ಶಿಕ್ಷಕರೆಂದು ಕರೆಯಲು ಸಾಧ್ಯವಿದೆಯೇ?
5. ಅದಕ್ಕಾಗಿಯೇ ನಾವು 'ಕ್ವಾಲಿಟಿ ಎಜುಕೇಶನ್', 'ಗುಣಮಟ್ಟದ ಶಿಕ್ಷಣ', 'ಶಿಕ್ಷಣದಲ್ಲಿ ಗುಣಮಟ್ಟದ ಖಾತರಿ', 'ಕ್ವಾಲಿಟಿ ಆಫ್ ಎಜುಕೇಶನ್', 'ಶಿಕ್ಷಣದ ಗುಣಮಟ್ಟ' ಎಂಬಿತ್ಯಾದಿಗಳನ್ನು ಹೇಳಿದಾಗ ನನಗೆ ಇವೆಲ್ಲವೂ ಎಡವಟ್ಟಾಗಿಯೂ ವಿಚಿತ್ರವಾಗಿಯೂ ಅನ್ನಿಸುತ್ತದೆ. ಇಲ್ಲಿ 'ಕ್ವಾಲಿಟಿ' ಅಥವಾ 'ಗುಣಮಟ್ಟ' ಎಂಬ ಪದವನ್ನು ಸೇರಿಸುವ ಮೂಲಕವೇ ನೀವು ಅದನ್ನು ತಪ್ಪಾದ ಪ್ರಯೋಗವನ್ನು ಮಾಡುತ್ತಿರುವಿರಿ. ಈ ಪದವು ಕೈಗಾರಿಕೋದ್ಯಮದಿಂದ ಬಹಳ ಸೀಮಿತವಾದ ಅರ್ಥವನ್ನು ಹೊತ್ತುತರುತ್ತದೆ ಮತ್ತು ಅದು ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ವಾಸ್ತವವಾಗಿ, ಈ 'ಗುಣಮಟ್ಟ' ಪದವು ಶಿಕ್ಷಣದ 'ಒಳ್ಳೆಯತನ' ಅಥವಾ ಅದರ ಮೌಲ್ಯಮಾಪನದ ಪ್ರಮಾಣವನ್ನು ತಲುಪಿಸಬಲ್ಲುದೇ ಎಂಬುದರ ಬಗ್ಗೆ ನಾವು ಯೋಚಿಸಬೇಕಿದೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ 'ಗುಣಮಟ್ಟ' ಎಂಬ ಪದವನ್ನು ವಾಸ್ತವವಾಗಿ 'ಒಳ್ಳೆಯತನ'ದ ಅಂಶಗಳನ್ನು ಉಲ್ಲೇಖಿಸಲೆಂದು ರೂಪಿಸಲಾಗಿಲ್ಲ. ನಾವು ಮೇಲೆ ನೋಡಿದಂತೆ, ಈ ಪದವು ಕೆಲವು ನಿಗದಿತ ಮಾನದಂಡಗಳನ್ನು ಹೊಂದುವುದನ್ನು ಮಾತ್ರ ಸೂಚಿಸುತ್ತದೆ. ಮತ್ತು ಈ ಮಾನದಂಡಗಳನ್ನು ಕೂಡ ಲಾಭ ಸಂಪಾದನೆಯ ಹಿತಾಸಕ್ತಿಯಿಂದ ಯಾವ ರೀತಿಯಿಂದ ರೂಪಿಸಲಾಗಿದೆಯೆಂದರೆ, ಉತ್ಪನ್ನವು ಮಾರಾಟಕ್ಕೆ ಯೋಗ್ಯವಾಗುವಂತೆ ಹಾಗೂ ಸಮಯ ಮಿತಿಯಲ್ಲಿ ಅದರ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗುವಂತೆ ಕನಿಷ್ಠ ಸ್ಥಿತಿಯನ್ನು (ಅತ್ಯಧಿಕವಲ್ಲ) ಸಾಧಿಸುವಂತೆ ರೂಪಿತವಾಗಿರುತ್ತದೆ. ನಮಗೆ ಈ 'ಗುಣಮಟ್ಟ' ಎಂಬ ಪದವು ಅತ್ಯವಶ್ಯಕವೇ ಎಂಬುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. 'ಗುಣಮಟ್ಟದ ಶಿಕ್ಷಣ'ದ ಅರ್ಥವೇನು ಎಂದು ಕೇಳುವ ಬದಲಿಗೆ, "ಒಳ್ಳೆಯ ಶಿಕ್ಷಣ"ದ ಅರ್ಥವೇನು ಎಂದು ನಾವು ಕೇಳಬಾರದೇ? ನಮಗೆ ಗುಣಮಟ್ಟದ ಶಿಕ್ಷಣ ಬೇಕು ಎಂದು ಹೇಳುವ ಬದಲಿಗೆ, ನಮಗೆ "ಒಳ್ಳೆಯ ಶಿಕ್ಷಣ" ಬೇಕು ಎಂದು ಹೇಳಬಾರದೇ?
6. ಇದೆಲ್ಲದರ ಜೊತೆಗೆ, ಶಿಕ್ಷಣದಲ್ಲಿ ಸರ್ವವ್ಯಾಪಿ, ಸಾರ್ವಕಾಲಿಕ ಹಾಗೂ ಸರ್ವಮಾನ್ಯ ಆಗುವಂಥ ಮಾನದಂಡವನ್ನು ರೂಪಿಸಲು ಸಾಧ್ಯವೇ ಎಂಬ ಪ್ರಶ್ನೆಯೂ ಕೂಡ ಇಲ್ಲಿ ಹುಟ್ಟಿಕೊಳ್ಳುತ್ತದೆ.

**ತೌಸೀಫ್:** ಅಬ್ಬಾ, ನಾನು ಈ ವಿಚಾರಗಳ ಬಗ್ಗೆ ಈ ಮೊದಲು ಯೋಚಿಸಿಯೇ ಇರಲಿಲ್ಲ. ನಿಮ್ಮ ಜೊತೆ ಮಾತುಕತೆ ನಡೆಸುವುದು ಅದಕ್ಕಾಗಿಯೇ ಒಂದು ಅದ್ಭುತ ಅನುಭವಾಗಿರುತ್ತದೆ. (ನಗುತ್ತಾ)

(ಇಬ್ಬರೂ ನಗುತ್ತಾ ಅಲ್ಲಿಂದ ಏಳುತ್ತಾರೆ ಮತ್ತು ಚಹಾದ ಹಣ ನೀಡಿ ಮರಳಿ ಮನೆಯ ಕಡೆ ಹೆಜ್ಜೆಗಳನ್ನು ಇಡುತ್ತಾರೆ)

**ತೌಸೀಫ್:** ಸರಿ, "ಗುಣಮಟ್ಟ" ಎಂಬ ಪದವು ತುಂಬ ಒಂದು ಸೀಮಿತ ಹಾಗೂ ತಾಂತ್ರಿಕ ಅರ್ಥವನ್ನು ಹೊಂದಿರುತ್ತದೆ ಎಂದು ಪರಿಗಣಿಸೋಣ. ಕೈಗಾರಿಕೋದ್ಯಮಗಳಲ್ಲಿ ಗುಣಮಟ್ಟವು "ಉತ್ಕೃಷ್ಟತೆ"ಯನ್ನು ಸಾಧಿಸಲು ಆಗುವುದಿಲ್ಲ ಎಂಬುದನ್ನು ಕೂಡ ನಾವು ಪರಿಣಿಸಬೇಕಿದೆ. ಏಕೆಂದರೆ, ಒಂದು ವೇಳೆ ಹಾಗೆ ಮಾಡಲು ಆರಂಭಿಸಿದರೆ ಅದನ್ನು ತಯಾರಿಸಲು ತಗಲುವ ಖರ್ಚು ಕೂಡ ಹೆಚ್ಚಾಗುತ್ತದೆ ಹಾಗೂ ಇದರಿಂದಾಗಿ ಲಾಭವನ್ನು ಸಂಪಾದಿಸುವುದು ಕಷ್ಟಕರವಾಗುತ್ತದೆ. ಈ ರೀತಿಯಲ್ಲಿ ಕೈಗಾರಿಕೆಗಳಲ್ಲಿ ಗುಣಮಟ್ಟದ ಮಾನದಂಡಗಳನ್ನು ಕೂಡ ಲಾಭ ಗಳಿಕೆಯ ಉದ್ದೇಶದಿಂದ ನಿರ್ಧರಿಸಲಾಗುತ್ತದೆ ಎಂಬ ವಿಚಾರವನ್ನು ಇಲ್ಲಿ ಹೇಳುವುದು ಸೂಕ್ತ ಎನ್ನಿಸುತ್ತದೆ. ನೀವು ಹೇಳಿದ ಶ್ರಮ ವಿಭಜನೆ ಮುಂತಾದ ಇನ್ನೂ ಅನೇಕ ವಿಚಾರಗಳು ಕೂಡ ಸರಿ ಅನ್ನಿಸುತ್ತಿದೆ. ನಿಜ, ಈ 'ಗುಣಮಟ್ಟ' ಎಂಬ ಪದವನ್ನೇ ನಾವು ಬಿಟ್ಟು ಬಿಡಬೇಕು ಎಂಬ ಮಾತನ್ನು ಒಂದು ಬಾರಿ ಒಪ್ಪಿಕೊಳ್ಳೋಣ ಹಾಗೂ "ಗುಣಮಟ್ಟದ ಶಿಕ್ಷಣ" ಅಥವಾ "ಕ್ವಾಲಿಟಿ ಎಜುಕೇಷನ್" ಎಂದು ಹೇಳುವ ಬದಲಿಗೆ "ಒಳ್ಳೆಯ ಶಿಕ್ಷಣ" ಎಂದು ಬಳಸುವುದನ್ನು ಪ್ರಾರಂಭಿಸೋಣ. ಆದರೆ "ಒಳ್ಳೆಯ ಶಿಕ್ಷಣ" ಎಂಬುದಕ್ಕೂ ಕೂಡ ನಾವು ಮಾನದಂಡವನ್ನು ಕಲ್ಪಿಸಬೇಕೋ ಬೇಡವೋ?

**ರಾಮಸ್ವರೂಪಜೀ:** ಖಂಡಿತ ಭಾಯ್, ನೀವು ಸರಿಯಾಗಿ ಹೇಳಿದ್ದೀರಿ, ಅದನ್ನಂತೂ ಮಾಡಲೇ ಬೇಕಾಗುತ್ತದೆ.

**ತೌಸೀಫ್:** ಹಾಗಾದರೆ, ಇಲ್ಲಿ ಏಳುವ ಪ್ರಶ್ನೆ, ಆ ಮಾನದಂಡ ಯಾವುದು?

**ರಾಮಸ್ವರೂಪಜೀ:** ನೋಡಿ ತೌಸೀಫ್ ಭಾಯ್, ಈಗ ನೀವು ಈ ಇಡೀ ವಿಷಯದ ಮೂಲಕ್ಕೇ ಕೈಹಾಕಿದ್ದೀರಿ. ಇದೊಂದು ಸೂಕ್ಷ್ಮ ವಿಷಯ ಎಂದು ನಾನು ಭಾವಿಸುತ್ತೇನೆ, ಆದ್ದರಿಂದ ಈ ಬಗ್ಗೆ ಸ್ವಲ್ಪ ಗಹನವಾಗಿ ಯೋಚಿಸಬೇಕಿದೆ.

**ತೌಸೀಫ್:** ಅದು ಸರಿ. ನಾನು ನಿಮ್ಮ ಕಳಕಳಿಯನ್ನು ಅರ್ಥಮಾಡಿಕೊಳ್ಳಬಲ್ಲೆ. ನಾನು ಒಬ್ಬ ಇಂಜಿನಿಯರ್ ಆಗಿರುವುದರಿಂದ ನಾನು ಒಬ್ಬ ಶಿಕ್ಷಕ ಅಥವಾ ಶಿಕ್ಷಣತಜ್ಞನಂತೆ ಯೋಚಿಸದೇ ಇರಬಹುದು, ಅಷ್ಟಾದರೂ ನನ್ನ ಕೆಲವು ವಿಚಾರಗಳು ಮತ್ತು ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಕೆಲವು ದಿನಗಳ ಹಿಂದಿನ ಮಾತು. ನನ್ನ ವಾಟ್ಸಾಪ್‌ನಲ್ಲಿ ನನಗೆ ಬಂದಿದ್ದ ಸಂದೇಶವೊಂದರಲ್ಲಿ ಖ್ಯಾತ ಗುಜರಾತಿ ಶಿಕ್ಷಕರಾದ ಗಿಜುಭಾಯ್ ಅವರ ಪುಸ್ತಕದ ಕೆಲವು ಆಯ್ದ ಭಾಗಗಳನ್ನು ನೀಡಲಾಗಿತ್ತು. ಅದನ್ನು ನೀವು ಓದಬೇಕೆಂದು ನಾನು ಇಚ್ಛಿಸುತ್ತೇನೆ.

(ತೌಸೀಫ್ ತನ್ನ ಮೊಬೈಲ್ ಫೋನ್‌ನಲ್ಲಿ ಆ ಸಂದೇಶವನ್ನು ತೆರೆಯುತ್ತಾರೆ ಹಾಗೂ ಅದನ್ನು ರಾಮಸ್ವರೂಪಜಿ ಅವರಿಗೆ ಓದಲು ಕೊಡುತ್ತಾರೆ. ರಾಮಸ್ವರೂಪಜಿ ಅವರು ಅಲ್ಲೇ ನಿಂತುಕೊಂಡು ಆ ಸಂದೇಶವನ್ನು ಓದುತ್ತಾರೆ...)

**ತೌಸೀಫ್:** ಶಿಕ್ಷಣದ ಒಳ್ಳೆಯತನದ ಮಾನದಂಡಕ್ಕೆ ಇದೊಂದು ಅದ್ಭುತ ಉದಾಹರಣೆ ಎಂದು ನನಗನಿಸುತ್ತದೆ. ಅವರ ಶಾಲೆ ಮತ್ತು ಅದರಲ್ಲಿ ನೀಡಲಾಗುವ ಶಿಕ್ಷಣದ ಒಳ್ಳೆಯತನದ ಮಾನದಂಡಗಳು ಯಾವುವು ಹಾಗೂ ಹೇಗಿರುತ್ತವೆ ಎಂಬುದನ್ನು ಗಿಜುಭಾಯ್ ಅವರು ಇಲ್ಲಿ ಸರಳ ಮತ್ತು ಪರಿಣಾಮಕಾರಿ ಭಾಷೆಯಲ್ಲಿ ಒಂದು ನೀಲನಕ್ಷೆಯನ್ನು ರಚಿಸಿದ್ದಾರೆ. ಯಾವುದೇ ರಾಜಿ ಇಲ್ಲದ ಕೆಲವು ವಿಷಯಗಳನ್ನು ಅವರು ಗುರುತಿಸಿದ್ದಾರೆ. ಅವರು ಶಿಕ್ಷಣದ ಒಳ್ಳೆಯತನದ ಕೆಲವು ಮಾನದಂಡಗಳನ್ನು ಗುರುತಿಸಿದ್ದು, ಅದರ ಮೇಲೆ ಯಾರೂ ಯಾವುದೇ ಗಮನವನ್ನು ನೀಡಿಲ್ಲ. ಇವೆಲ್ಲವೂ ಅವರ ಶಾಲೆ ಮತ್ತು ಅದರಲ್ಲಿ ನೀಡಲಾಗುವ ಶಿಕ್ಷಣವನ್ನು ಉತ್ತಮವಾಗಿಸುತ್ತವೆ, ಅತ್ಯುತ್ತಮವಾಗಿಸುತ್ತವೆ. (ಮಾತುಕತೆ ಮುಂದುವರಿಯುತ್ತಲೇ ರಾಮಸ್ವರೂಪಜಿ ಅವರ ಮನೆ ಬಂದಿದ್ದೇ ಗೊತ್ತಾಗಿರಲಿಲ್ಲ. ರಾಮಸ್ವರೂಪಜಿ ಅವರು ತಮ್ಮ ಮನೆಗೆ ಬರುವಂತೆ ತೌಸೀಫ್ ಅವರನ್ನು ಆಹ್ವಾನಿಸುತ್ತಾರೆ. ತಮ್ಮ ನಡುವಿನ ಮಾತುಕತೆಯನ್ನು ಯಾವುದೋ ಒಂದು ಅಂತಿಮ ನಿರ್ಣಯಕ್ಕೆ ತಂದು ಮುಕ್ತಾಯ ಮಾಡುವುದು ಅವರ ಉದ್ದೇಶವಾಗಿತ್ತು. ರಾಮಸ್ವರೂಪಜಿ ಅವರು ತೌಸಿಫ್ ಅವರನ್ನು ತಮ್ಮ ಮನೆಯ ಬೈಠಕ್‌ಗೆ ಕರೆದೊಯ್ಯುತ್ತಾರೆ ಹಾಗೂ ಅಲ್ಲಿ ಕುಳಿತು ಮಾತುಕತೆಯನ್ನು ಮುಂದುವರಿಸುತ್ತಾರೆ.)

**ರಾಮಸ್ವರೂಪಜೀ:** ನಿಜ ತೌಸೀಫ್, ನಿಮ್ಮ ಮಾತು ತುಂಬ ಸರಿಯಾಗಿದೆ. ಗಿಜುಭಾಯ್ ಅವರು ಇಲ್ಲಿ ಶಿಕ್ಷಣದ ಒಳ್ಳೆಯತನದ ಮಾನದಂಡಗಳಿಗೆ ಸಂಬಂಧಿಸಿದಂತೆ ಸರಳ ಮತ್ತು ಪರಿಣಾಮಕಾರಿ ಭಾಷೆಯಲ್ಲಿ ಒಂದು ನೀಲನಕ್ಷೆಯನ್ನು ರೂಪಿಸಿರುವ ಬಗ್ಗೆ ನನಗೆ ಯಾವುದೇ ಸಂಶಯವಿಲ್ಲ. ನಿಮಗೆ ಹೇಗೆ ಅವರ ಅನೇಕ ವಿಚಾರಗಳು ಇಷ್ಟವಾದವೋ, ಅದೇ ರೀತಿ ನನಗೆ ಅವರು ಒಂದು ಮಾತು ಇಷ್ಟವಾಯಿತು. ಅದೆಂದರೆ, ಗಿಜುಭಾಯ್ ಅವರು ಸ್ಪಷ್ಟವಾದ ಪದಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಅವರು ತಮ್ಮ ಮಾನದಂಡಗಳನ್ನು ಯಾವ ಭಾಷೆಯಲ್ಲಿ ವಿವರಿಸಿದ್ದಾರೆ ಎಂದರೆ, ಅವೆಲ್ಲವೂ ನಮ್ಮ ಮುಂದೆ ಕೆಲವು ಮೂರ್ತ ಅಂಶಗಳಾಗಿ ಹೊರಹೊಮ್ಮುತ್ತವೆ. ಈಗ ಅದು ಆಗುತ್ತಿದೆಯೇ ಅಥವಾ ಇಲ್ಲವೇ ಎಂದು ಯಾರು ಬೇಕಾದರೂ ಬಂದು ನೋಡಬಹುದು. ಅವರು ಪ್ರತಿ ಮಾನದಂಡಕ್ಕೂ ಯಾವ ರೀತಿಯಲ್ಲಿ ಮೂರ್ತ ರೂಪ ನೀಡಲು

ಪ್ರಯತ್ನಿಸಿದ್ದಾರೆ ಎಂದರೆ ಪ್ರತಿಯೊಬ್ಬರೂ ಅವುಗಳನ್ನು ಸಾಧ್ಯವಾದಷ್ಟು ಆಚರಣೆಗೆ ತರುವುದನ್ನು ನೋಡಬಹುದಾಗಿದೆ, ಅನುಭವಿಸಬಹುದಾಗಿದೆ, ಅವಲೋಕನ ಮಾಡಬಹುದಾಗಿದೆ.

ನನಗೆ ಇಷ್ಟವಾದ ಇನ್ನೊಂದು ವಿಚಾರವೆಂದರೆ ಗಿಜುಭಾಯ್ ಅವರು ಇಲ್ಲಿ ತಮ್ಮ ವಿವೇಚನೆಯಿಂದ ಶಿಕ್ಷಣದ ಒಳ್ಳೆಯತನದ ಪರಿಕಲ್ಪನೆಯನ್ನು ಮಾಡಿದ್ದಾರೆ ಮತ್ತು ಅದಕ್ಕೆ ಬದ್ಧವಾಗಿ ನಿಂತಿದ್ದಾರೆ. ಅವರು ಅಂತಹ ಕಲ್ಪನೆಗಳನ್ನು ಏಕೆ ಮಾಡುತ್ತಿದ್ದಾರೆ ಎಂಬುದಕ್ಕೆ ಅವರ ಬಳಿ ಸಾಕಷ್ಟು ತರ್ಕಗಳಿರುವುದು ಕೂಡ ನನಗೆ ತಿಳಿದಿದೆ. ಒಬ್ಬರು ತನ್ನ ಸ್ವಂತ ವಿವೇಚನೆಯಿಂದ ಕಲ್ಪನೆ ಮಾಡುವುದು ಮತ್ತು ನಂತರ ಈ ಕಲ್ಪನೆಯು ಏಕೆ ಸೂಕ್ತವಾಗಿದೆ ಎಂಬುದರ ಪರವಾಗಿ ತರ್ಕವನ್ನು ರೂಪಿಸುವ ಅವರ ದೃಷ್ಟಿಕೋನವು ಕೂಡ ನನಗೆ ಇಷ್ಟವಾಯಿತು.

---

ಪುಟ 36 ಬಾಕ್ಸ್ ಐಟಂ

**ನನ್ನ ಶಾಲೆಯಲ್ಲಿ ಇದು ನಡೆಯುವುದಿಲ್ಲ***

**ಗಿಜುಭಾಯ್**

- ನನ್ನ ಶಾಲೆಯಲ್ಲಿ ಶಿಕ್ಷಣಶಾಸ್ತ್ರದ ಪುಸ್ತಕಗಳನ್ನು ಹೊಂದಿರುವ ಬೃಹತ್ ಗ್ರಂಥಾಲಯವಿಲ್ಲದಿದ್ದರೂ ನಡೆಯುತ್ತದೆ, ಆದರೆ ಕಾಡಿ ಬೇಡಿದರೂ ಶಿಕ್ಷಣದ ಪುಸ್ತಕಗಳಿಂದ ಏನನ್ನೂ ಕಲಿಸದಿದ್ದರೆ ನಡೆಯುವುದಿಲ್ಲ.
- ನನ್ನ ಶಾಲೆಯ ಕಟ್ಟಡವು ಐಷಾರಾಮಿ ಕಲ್ಲುಗಳಿಂದ ಕಟ್ಟಿರದಿದ್ದರೂ ಸುಸಜ್ಜಿತ ನೆಲವನ್ನು ಹೊಂದಿಲ್ಲದಿದ್ದರೂ ನಡೆಯುತ್ತದೆ, ಆದರೆ ಅದರ ಅಂಗಳದಲ್ಲಿ ಹೊಂಡಗಳು ಬಿದ್ದಿದ್ದರೆ ಅಥವಾ ಸುಣ್ಣಮಣ್ಣಿನ ಗಾರೆ ಇಲ್ಲದಿದ್ದರೆ ನಡೆಯುವುದಿಲ್ಲ.
- ನನ್ನ ಶಾಲೆಯ ಗೋಡೆಗಳು ಬಣ್ಣಗಳಿಂದ ಸುಂದರಗೊಂಡಿಲ್ಲದಿದ್ದರೂ ನಡೆಯುತ್ತದೆ, ಆದರೆ ಅವುಗಳ ಮೇಲೆ ಒಂದೇ ಒಂದು ಜೇಡರಬಲೆ ಅಥವಾ ಧೂಳು ಮೆತ್ತಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಸುಂದರವಾದ ರತ್ನಗಂಬಳಿ ಹಾಸಿರದಿದ್ದರೂ ನಡೆಯುತ್ತದೆ, ಆದರೆ ಎಲ್ಲಿಯಾದರೂ ಧೂಳು ಮತ್ತು ಕಸ ಇದ್ದರೆ ಹಾಗೂ ಅದು ನಮ್ಮ ಪಾದಗಳಿಗೆ ತಗಲುತ್ತಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ಬೋಧನಾ ಉಪಕರಣಗಳಿಲ್ಲದಿದ್ದರೂ ನಡೆಯುತ್ತದೆ, ಆದರೆ ನನ್ನ ಶಾಲೆಯಲ್ಲಿ ಇರುವ ಕೆಲವೇ ಉಪಕರಣಗಳನ್ನು ನಿಜಕ್ಕೂ ಬಳಸದಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ದೊಡ್ಡದಾದ ಮಕ್ಕಳ ಗ್ರಂಥಾಲಯವಿಲ್ಲದಿದ್ದರೂ ನಡೆಯುತ್ತದೆ, ಆದರೆ ಅದು ಕೈಬರಹದಲ್ಲಿದ್ದರೂ ಸರಿ, ಮಕ್ಕಳು ಉತ್ಸಾಹದಿಂದ ಓದುವಂತಹ ಪುಸ್ತಕಗಳಿಲ್ಲದಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ನಾನು ತುಂಬಾ ಓದಿಕೊಂಡಿರುವ ದೊಡ್ಡ ವಿದ್ವಾಂಸನಾಗಿಲ್ಲದಿದ್ದರೂ ನಡೆಯುತ್ತದೆ, ಆದರೆ ನಾನು ಮಕ್ಕಳ ಬಗ್ಗೆ ಗೌರವ ಇಟ್ಟುಕೊಳ್ಳದಿದ್ದರೆ, ಅವರ ಶ್ರೇಯೋಭಿವೃದ್ಧಿಯನ್ನು ಅರ್ಥೈಸಿಕೊಂಡು ಅವರಿಗೆ ಪೂರಕ ಪರಿಸರವನ್ನು ಒದಗಿಸದಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ, ನಾನು ಮಕ್ಕಳಿಗೆ ಕಲಿಸಲು ಅಥವಾ ಪ್ರತಿ ಕ್ಷಣವೂ ಅವರನ್ನು ಜ್ಞಾನವಂತರನ್ನಾಗಿಸಲು ಹಾತೊರೆಯದಿದ್ದರೂ ನಡೆಯುತ್ತದೆ, ಆದರೆ ನಾನು ಅವರ ಕಾರ್ಯಕ್ಕೆ ಅಡ್ಡಿಯಾದರೆ, ಅವರನ್ನು ಪದೇ ಪದೇ ಹೆದರಿಸಿ ಬೆದರಿಸಿ ಓದಲು ಕುಳಿತುಕೊಳ್ಳುವಂತೆ ಮಾಡಿದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಮಕ್ಕಳು ಎರಡು ಕ್ಷಣ ಓದುವುದು ಮತ್ತು ಎರಡು ಕ್ಷಣ ಆಡುವುದು ಮಾಡಿದರೂ ನಡೆಯುತ್ತದೆ, ಆದರೆ ಮಕ್ಕಳು ಕಾರ್ಖಾನೆಯ ಕಾರ್ಮಿಕರಂತೆ ದಿನವಿಡೀ ಕೆಲಸ ಮಾಡುವುದು ಹಾಗೂ ನಾನು ಅವರ ಮೇಲೆ ಕಟ್ಟುನಿಟ್ಟಾಗಿ ನಿಗಾ ಇಡುವುದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಮಕ್ಕಳು ನನ್ನನ್ನು ತಬ್ಬಿಕೊಳ್ಳದಿದ್ದರೆ ಇಲ್ಲವೇ ನನ್ನ ಸ್ನೇಹಿತರಂತೆ ನನ್ನ ಹಿಂದೆ ಮುಂದೆ ಓಡಾಡದಿದ್ದರೂ ನಡೆಯುತ್ತದೆ, ಆದರೆ ಅವರು ನನ್ನಿಂದ ದೂರ ದೂರ ಓಡುತ್ತಿದ್ದರೆ ಹಾಗೂ ನನ್ನನ್ನು ನೋಡಿ ಭಯಭೀತರಾಗುತ್ತಿದ್ದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಮಕ್ಕಳು ಕಡಿಮೆ ಓದುತ್ತಿದ್ದರೆ ಇಲ್ಲವೇ ಮೆತ್ತಗೆ ಓದುತ್ತಿದ್ದರೂ ನಡೆಯುತ್ತದೆ, ಆದರೆ ಕಿರಿಚುತ್ತಾ, ಜೋರಾಗಿ ಓದುತ್ತಾ ಸುಸ್ತಾದರೆ ಅಥವಾ ನಿತ್ರಾಣಕ್ಕೊಳಗಾದರೆ ಅದು ನಡೆಯುವುದಿಲ್ಲ.

- ನನ್ನ ಶಾಲೆಯಲ್ಲಿ ಮಕ್ಕಳು ತಮಗೆ ಇಷ್ಟವಾದಲ್ಲಿ ಕುಳಿತುಕೊಳ್ಳುವುದು, ಮನಸ್ಸಾದರೆ ಓದುವುದು ಇಲ್ಲವೇ ಚಿತ್ರ ಬಿಡಿಸುವುದನ್ನು ಮಾಡಿದರೆ ನಡೆಯುತ್ತದೆ, ಆದರೆ ಯಾರಾದರೂ ಬಂದಾಗ ತೋರಿಕೆಗಾಗಿ ಬರೆಯುವುದನ್ನಾಗಲಿ, ಚಿತ್ರ ಬಿಡಿಸುವುದನ್ನಾಗಲಿ ಮಾಡಿದರೆ ಅದು ನಡೆಯುವುದಿಲ್ಲ.
- ನನ್ನ ಶಾಲೆಯಲ್ಲಿ ಮಕ್ಕಳು ಸಮಯಕ್ಕೆ ಸರಿಯಾಗಿ ಕೆಲಸ ಪೂರ್ಣಗೊಳಿಸದಿದ್ದಾಗ ನನ್ನ ಬಳಿ ಬಂದು ಸಮಾಧಾನದಿಂದ ಮನವರಿಕೆ ಮಾಡಿದರೆ ಇಲ್ಲವೇ ನಿಧಾನಗತಿಯಲ್ಲಿ ಕೆಲಸ ಮಾಡಿದರೂ ನಡೆಯುತ್ತದೆ, ಆದರೆ ನಾನು ಹೊಡೆದು ಇಲ್ಲವೇ ಬೈದು ಬೆದರಿಸಿದಾಗ ಅವರು ತರಾತುರಿಯಿಂದ ಕೆಲಸ ಮಾಡಿದರೆ ಅದು ನಡೆಯುವುದಿಲ್ಲ.

*(*ಗಿಜುಭಾಯ್ ಅವರ ಪುಸ್ತಕ 'ಶಿಕ್ಷಕ್ ಹೋ ತೋ' ದಿಂದ ಆಯ್ದ ಭಾಗ)*

---

**ತೌಸೀಫ್:** ನಿಜ, ನೀವು ಹೇಳಿದ್ದು ಸಂಪೂರ್ಣವಾಗಿ ಸರಿಯಾಗಿದೆ. ಹಾಗಾದರೆ ಈಗ ನಾವು ಒಳ್ಳೆಯ ಶಿಕ್ಷಣದ ಮಾನದಂಡ ಯಾವುದು ಎಂದು ಹೇಳಬಹುದು. ಅದರ ಒಂದು ಸ್ಥೂಲನೋಟ ಸಿಕ್ಕಂತಾಗಿದೆ. ಈಗ ನಾನು ಅಶ್ರಫ್‌ನಿಗಾಗಿ ಶಾಲೆಯನ್ನು ಹುಡುಕುವಾಗ ಮೊದಲು ಮೂರು ಅಥವಾ ನಾಲ್ಕು ವಿಷಯಗಳನ್ನು ಗಮನಿಸುತ್ತೇನೆ:

**ಶಿಕ್ಷಕ ಮತ್ತು ಮಕ್ಕಳ ನಡುವಿನ ಸಂಬಂಧ:** ಅಲ್ಲಿ ಮಕ್ಕಳಿಗೆ ಗೌರವ ನೀಡಲಾಗುತ್ತಿದೆಯೇ?; ಅಲ್ಲಿ ಅನಿರ್ಬಂಧ, ಭಯ ಮತ್ತು ಒತ್ತಡ ಮುಕ್ತವಾದ ವಾತಾವರಣವಿದೆಯೇ?; ಶಿಕ್ಷಕರ ಮತ್ತು ಮಕ್ಕಳ ನಡವಳಿಕೆಯಲ್ಲಿ ಪ್ರಾಮಾಣಿಕತೆ ಇದೆಯೇ?

**ಕಲಿಯುವ ಮತ್ತು ಕಲಿಸುವ ವಿಧಾನಗಳು:** ಉದಾಹರಣೆಗೆ, ಮಕ್ಕಳಿಗೆ ತಮ್ಮದೇ ಆದ ಗತಿಯಲ್ಲಿ ಕಲಿಯುವ ಸ್ವಾತಂತ್ರ್ಯವಿದೆಯೇ? ಅವರಿಗೆ ತಮ್ಮ ದೃಷ್ಟಿಕೋನ ಮತ್ತು ಸೃಜನಶೀಲತೆಯನ್ನು ವ್ಯಕ್ತಪಡಿಸಲು ಸ್ವಾತಂತ್ರ್ಯವಿದೆಯೇ?

**ಬೋಧನೆ ಹಾಗೂ ಬೋಧಿಸುವ ಸಾಧನಗಳು ಮತ್ತು ಸಾಮಗ್ರಿಗಳು:** ಉದಾಹರಣೆಗೆ, ಅಲ್ಲಿ ಮಕ್ಕಳಿಗೆ ಉಪಕರಣಗಳನ್ನು ಬಳಸುವ ಸ್ವಾತಂತ್ರ್ಯವಿದೆಯೇ? ಅಲ್ಲಿ ಮಕ್ಕಳಿಗೆ ಸೂಕ್ತವಾದ ಪಠ್ಯ ಸಾಮಗ್ರಿಗಳ ಲಭ್ಯತೆ ಇದೆಯೇ? ಇತ್ಯಾದಿ.

**ಶಾಲಾ ಕಟ್ಟಡದ ಪರಿಸ್ಥಿತಿ ಮತ್ತು ಪರಿಸರ:** ಅಲ್ಲಿ ಸ್ವಚ್ಛತೆ-ಶುಚಿತ್ವದ ಬಗ್ಗೆ ಗಮನ ಹರಿಸಲಾಗಿದೆಯೇ? ಇತ್ಯಾದಿ. ಇವೆಲ್ಲವೂ ಗಿಜುಭಾಯ್ ಅವರು ಮೇಲೆ ಹೇಳಿದ ಮಾತುಗಳು. ಒಂದು ವೇಳೆ ಆ ಶಾಲೆಯಲ್ಲಿ ಈ ಸಂಗತಿಗಳು ಇರುವುದನ್ನು ನಾನು ಕಂಡುಕೊಂಡರೆ, ಅದು ನನ್ನ ಮಗನಿಗೆ ಒಳ್ಳೆಯ ಶಿಕ್ಷಣವನ್ನು ನೀಡುವ ಉತ್ತಮ ಶಾಲೆ ಎಂದು ನಾನು ಭಾವಿಸುತ್ತೇನೆ. ಅಲ್ಲವೇ?

**ರಾಮಸ್ವರೂಪಜೀ:** ನೋಡಿ ತೌಸೀಫ್ ಭಾಯ್, ನಿಮ್ಮ ಮನಸ್ಸಿಗೆ ನೋವುಂಟುಮಾಡಲು ನಾನು ಬಯಸುವುದಿಲ್ಲ, ಆದರೆ ಈಗ ನಾನೊಂದು ಪ್ರಶ್ನೆಯನ್ನು ಕೇಳಲೇಬೇಕಾಗಿದೆ.

**ತೌಸೀಫ್:** ಎಂಥ ಪ್ರಶ್ನೆ? ಕೇಳಿಬಿಡಿ.

**ರಾಮಸ್ವರೂಪಜೀ:** ಈಗ ನಾನು ನಿಮ್ಮ ಭಾಷೆಯಲ್ಲಿಯೇ ಪ್ರಶ್ನೆ ಕೇಳುತ್ತೇನೆ. ಆರಂಭದಲ್ಲಿ ಸ್ವತಃ ನೀವೇ 'ಒಟ್ಟು ಗುಣಮಟ್ಟ ಖಾತರಿ' (ಟೋಟಲ್ ಕ್ವಾಲಿಟಿ ಅಶ್ಯೂರೆನ್ಸ್) ಕುರಿತು ಮಾತನಾಡಿರುವಿರಿ. ಅದರರ್ಥ ಕೈಗಾರಿಕೋದ್ಯಮದಲ್ಲಿ, ಉತ್ಪನ್ನದ ಗುಣಮಟ್ಟದ ಪ್ರತಿಯೊಂದು ಅಂಶಕ್ಕೂ ಸಮಾನ ಗಮನ ನೀಡಲಾಗುತ್ತದೆ ಮತ್ತು ಆಗ ಮಾತ್ರವೇ ಅದರ ಗುಣಮಟ್ಟದ ಪರಿಪೂರ್ಣತೆಯನ್ನು ಖಾತರಿಪಡಿಸಲಾಗುತ್ತದೆ. ಅರ್ಥಾತ್ ಅಲ್ಲಿ ಗುಣಮಟ್ಟವನ್ನು ಒಂದು ಪರಿಪೂರ್ಣತೆಯಾಗಿ ನೋಡಲಾಗುತ್ತದೆ. ಸರಿ ತಾನೇ?

**ತೌಸೀಫ್:** ನೀವು ಹೇಳಿದ್ದು ಖಂಡಿತವಾಗಿಯೂ ಸರಿಯಾಗಿದೆ.

**ರಾಮಸ್ವರೂಪಜೀ:** ಅಂದರೆ ನಾವು ಶಿಕ್ಷಣದ ಒಳ್ಳೆಯತನದ ಮಾನದಂಡವನ್ನು ಕೂಡ ಅದೇ ಪರಿಪೂರ್ಣತೆಯಲ್ಲೇ ನೋಡಬೇಕಾಗುತ್ತದೆ ತೌಸೀಫ್ ಭಾಯ್. ಕನಿಷ್ಠ ಪಕ್ಷ ಆ ಪ್ರಯತ್ನವನ್ನಾದರೂ ಮಾಡಲೇಬೇಕಾಗುತ್ತದೆ.

**ತೌಸೀಫ್:** ಹಾಗಾದರೆ ಮೇಲೆ ನೀಡಲಾದ ಗಿಜುಭಾಯ್ ಅವರ ಉದಾಹರಣೆಯಲ್ಲಿ ಶಿಕ್ಷಣದ ಒಳ್ಳೆಯತನವನ್ನು ಪರಿಪೂರ್ಣತೆಯಲ್ಲಿ ನೋಡಲಾಗಿಲ್ಲ ಎಂದು ನಿಮಗೆ ಅನಿಸುತ್ತದೆಯೇ; ಪ್ರಾಯಶಃ ಈ ಸಿದ್ಧಮಾದರಿಯಲ್ಲಿ ಇನ್ನೂ ಬರದಿರುವ ಯಾವುದಾದರೂ ಬಿಟ್ಟುಹೋಗಿದೆಯೇ?

**ರಾಮಸ್ವರೂಪಜೀ:** ಹೌದು, ಪ್ರಾಯಶಃ ನಾನು ಅದನ್ನೇ ಹೇಳಲು ಪ್ರಯತ್ನಿಸುತ್ತಿದ್ದೇನೆ. ಹಾಗೂ ಬಹುಶಃ ನಾನು ಅದಲ್ಲದೆ, ಹೆಚ್ಚುವರಿಯಾಗಿ ಇನ್ನೇನನ್ನೋ ಹೇಳಲು ಬಯಸುತ್ತಿದ್ದೇನೆ:

ಮೊತ್ತಮೊದಲನೆಯದಾಗಿ, ಶಿಕ್ಷಣದ ಒಳ್ಳೆಯತನದ ಯಾವ ಮಾನದಂಡವೂ ನಿಶ್ಚಿತವಾಗಿಲ್ಲ, ಇದರಿಂದಾಗಿ ಜನರು ಶಿಕ್ಷಣವನ್ನು ನೋಡಲು-ಅರ್ಥೈಸಲು ಬೇರೆ ಬೇರೆ ದೃಷ್ಟಿಕೋನಗಳು ಮತ್ತು ವಿಚಾರಗಳನ್ನು ಹೊಂದಿರುತ್ತಾರೆ ಎಂದು ನಾನು ಇಲ್ಲಿ ಸ್ಪಷ್ಟಪಡಿಸಲು ಬಯಸುತ್ತೇನೆ. ಈ ದೃಷ್ಟಿಕೋನಗಳ, ಮನೋಭಾವಗಳ ತಿಳಿವಳಿಕೆಯಲ್ಲಿ, ಒಳ್ಳೆಯತನದ ಮಾನದಂಡ ಯಾವುದು ಎಂಬುದನ್ನು ನಿರ್ಧರಿಸಲಾಗುತ್ತದೆ ಹಾಗೂ ಬಳಿಕ ಅವುಗಳನ್ನು ವ್ಯಾಖ್ಯಾನಿಸಬೇಕಾಗುತ್ತದೆ, ಮರುವ್ಯಾಖ್ಯಾನಿಸಬೇಕಾಗುತ್ತದೆ. ಹೀಗಾಗಿ ಮೇಲೆ ನೀಡಲಾದ ಉದಾಹರಣೆಯಲ್ಲಿ ತಪ್ಪಿಹೋಗಿರುವ ಬಹಳ ಮುಖ್ಯವಾದ ಮಾನದಂಡವೆಂದರೆ, ಶಿಕ್ಷಣವನ್ನು ನೋಡುವ ಮನೋಭಾವ- ಅದರ ಅರ್ಥ, ಆದರ್ಶಗಳು, ಮೌಲ್ಯಗಳಾಗಿವೆ.

**ತೌಸೀಫ್:** ಇದು ನನಗೆ ಅರ್ಥವಾಗಲಿಲ್ಲ.

**ರಾಮಸ್ವರೂಪಜೀ:** ಸರಿ, ಹಾಗಾದರೆ ಒಂದು ವಿಷಯವನ್ನು ಹೇಳಿ, ಮಕ್ಕಳನ್ನು ಸ್ಪರ್ಧಾತ್ಮಕವಾಗಿಸುತ್ತೇವೆ ಎಂದು ಹೇಳಿಕೊಳ್ಳುವಂಥ ಶಾಲೆಗೆ ನೀವು ನಿಮ್ಮ ಮಗನನ್ನು ಸೇರಿಸಲು ಬಯಸುತ್ತೀರಾ?

**ತೌಸೀಫ್:** ಹುಂ, ಇದಂತೂ ಸ್ವಲ್ಪ ಕಠಿಣ ಪ್ರಶ್ನೆಯಾಗಿದೆ. ಆದರೆ ಸ್ಪರ್ಧಾತ್ಮಕವಾಗಿರುವುದು ಕೊನೆಗೂ ಅದೊಂದು ದೊಡ್ಡ ಉಪಯುಕ್ತ ಸಂಗತಿಯಲ್ಲ ಎಂದು ನನಗನಿಸುತ್ತದೆ. ಸ್ಪರ್ಧಾತ್ಮಕವಾಗಿರುವವರು ನಿರಂತರವಾಗಿ ತಮ್ಮೊಂದಿಗೆ ಮತ್ತು ಇತರರೊಂದಿಗೆ ಹೋರಾಡುತ್ತಿರುತ್ತಾರೆ, ಮುಂದೆ ಬರಲು ಹೆಣಗಾಡುತ್ತಿರುತ್ತಾರೆ. ಪ್ರಾಯಶಃ ವಿವೇಚನಾರಹಿತವಾದ ಸ್ಪರ್ಧಾತ್ಮಕತೆಯು ತುಂಬಾ ಉಪಯುಕ್ತವಾದ ಸಂಗತಿಯಲ್ಲ. ನೀವು ಅನವಶ್ಯಕವಾಗಿ ನಿಮ್ಮಿಂದ ನೀವೇ ಹಾಗೂ ಇತರರಿಂದಲೂ ಕೂಡ ಪ್ರತ್ಯೇಕಿಸಿಕೊಳ್ಳುತ್ತೀರಿ.

**ರಾಮಸ್ವರೂಪಜೀ:** ಹಾಗಾದರೆ ನಿಮ್ಮ ಉತ್ತರ 'ಇಲ್ಲ' ಎಂದಾಗಿದೆ. ಏಕೆಂದರೆ 'ಸ್ಪರ್ಧಾತ್ಮಕ' ಶಿಕ್ಷಣವು ಒಂದು ಉತ್ತಮ ಮಾದರಿಯಲ್ಲ ಎಂದು ನಿಮಗೆ ಅನ್ನಿಸುತ್ತಿದೆ. ಯಾವುದೇ ಶಿಕ್ಷಣವು ತನಗಾಗಿ ಅಂತಹ ಆದರ್ಶಗಳನ್ನು ಆಯ್ಕೆ ಮಾಡಿಕೊಳ್ಳಬಾರದು. ಶಿಕ್ಷಣದ ಆದರ್ಶ ಮತ್ತು ಮೌಲ್ಯವು ಬೇರೆ ಯಾವುದಾದರೂ ಆಗಿರಬೇಕೆಂದು ನಿಮಗೀಗ ಅನ್ನಿಸುತ್ತಿರಬಹುದು, ಅಲ್ಲವೇ?

**ತೌಸೀಫ್:** ಖಂಡಿತವಾಗಿಯೂ ಹೌದು. ಓಹ್! ಇದರರ್ಥ ಶಿಕ್ಷಣದ ಒಳ್ಳೆಯತನದ ಮಾನದಂಡವು ಶಿಕ್ಷಣದ ಆದರ್ಶ ಮತ್ತು ಮೌಲ್ಯವಾಗಿರುತ್ತದೆ ಎಂದು ನನಗೀಗ ಅರ್ಥವಾಗಿದೆ. ಭೇಷ್ ರಾಮಸ್ವರೂಪಜೀ, ಅದ್ಭುತ. ಶಾಲೆಯೊಂದು ಶಿಕ್ಷಣವನ್ನು ಹೇಗೆ ನೋಡುತ್ತದೆ, ಅದು ತನಗಾಗಿ ಯಾವ ಆದರ್ಶ ಮತ್ತು ಮೌಲ್ಯಗಳನ್ನು ಹೊಂದಿಸಿಕೊಂಡಿದೆ ಎಂದು ನಾನು ಈಗ ಖಂಡಿತವಾಗಿ ತಿಳಿದುಕೊಳ್ಳಲು ಬಯಸುತ್ತೇನೆ. ಹಾಗಂತ ಆ ಶಾಲೆಯು ತನಗಾಗಿ ಯಾವ ಆದರ್ಶ ಮತ್ತು ಮೌಲ್ಯಗಳನ್ನು ಹೊಂದಿಸಿಕೊಂಡಿದೆ ಎಂಬುದನ್ನು ನಾನು ತಿಳಿದುಕೊಳ್ಳುವುದಾದರೂ ಹೇಗೆ?

**ರಾಮಸ್ವರೂಪಜೀ:** ಅಲ್ಲಿನ ಶಿಕ್ಷಕರು ಮತ್ತು ಪ್ರಾಂಶುಪಾಲರ ಜೊತೆ ಮಾತನಾಡುತ್ತಾ, ಅವರ ಬೇರೆ ಬೇರೆ ದಾಖಲೆಗಳನ್ನು ಓದುತ್ತಾ ಅದನ್ನು ತಿಳಿದುಕೊಳ್ಳಬಹುದು. ಇನ್ನೂ ಅನೇಕ ವಿಧಾನಗಳಿವೆ, ಅವುಗಳ ಬಗ್ಗೆ ಸ್ವಲ್ಪ ಸಮಯದ ಬಳಿಕ ಮಾತನಾಡೋಣ.

ಎರಡನೆಯ ವಿಷಯವೆಂದರೆ, ತೌಸೀಫ್ ಅವರ ಶಿಕ್ಷಣದ ಆದರ್ಶ ಮತ್ತು ಮೌಲ್ಯಗಳು ವಾಸ್ತವವಾಗಿ ಶಿಕ್ಷಣದ ಒಳ್ಳೆಯತನದ ಮೂಲಭೂತ ಮಾನದಂಡವಾಗಿದೆ. ಏಕೆಂದರೆ ಈ ಆದರ್ಶ ಮತ್ತು ಮೌಲ್ಯಗಳೇ, ಇತರೆ ಮಾನದಂಡಗಳು ಯಾವುದಾಗಿರಬೇಕು ಹಾಗೂ ಹೇಗಿರಬೇಕು ಎಂಬುದನ್ನು ನಿರ್ಧರಿಸುತ್ತವೆ. ಇದನ್ನು ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳೋಣ. ಈಗ ನಿಮ್ಮ ಮುಂದೆ ನಾನು ಗಿಜುಭಾಯ್ ಅವರ ಮಾನದಂಡವನ್ನು ಇಡುತ್ತೇನೆ:

"ನನ್ನ ಶಾಲೆಯಲ್ಲಿ ಮಕ್ಕಳು ಎರಡು ಕ್ಷಣ ಓದುವುದು ಮತ್ತು ಎರಡು ಕ್ಷಣ ಆಡುವುದು ಮಾಡಿದರೂ ನಡೆಯುತ್ತದೆ, ಆದರೆ ಮಕ್ಕಳು ಕಾರ್ಖಾನೆಯ ಕಾರ್ಮಿಕರಂತೆ ದಿನವಿಡೀ ಕೆಲಸ ಮಾಡುವುದು ಹಾಗೂ ನಾನು ಅವರ ಮೇಲೆ ಕಟ್ಟುನಿಟ್ಟಾಗಿ ನಿಗಾ ಇಡುವುದು ನಡೆಯುವುದಿಲ್ಲ."

ನೀವು ನನಗೆ ಸ್ವಲ್ಪ ಯೋಚಿಸಿ ಹೇಳಿ, ಅವರು ತಮ್ಮ ಶಾಲೆಗೆ ಈ ಮಾನದಂಡವನ್ನು ಏಕೆ ರೂಪಿಸಿಕೊಂಡರು?

**ತೌಸೀಫ್:** ತಮ್ಮ ಮೇಲೆ ಯಾರೋ ಕಣ್ಣಿಟ್ಟಿದ್ದಾರೆ ಎಂಬ ಒತ್ತಡಕ್ಕೆ ತಮ್ಮ ಮಕ್ಕಳು ಒಳಗಾಗಬಾರದು ಎಂಬ ವಿಚಾರ ಗಿಜುಭಾಯ್ ಅವರ ಮನಸ್ಸಿನಲ್ಲಿ ಎಲ್ಲೋ ಇದ್ದಿರಬೇಕು ಎಂದು ನನಗನಿಸುತ್ತದೆ. ಬಹುಶಃ ಅವರ ದೃಷ್ಟಿಯಲ್ಲಿ ಪ್ರತಿಕ್ಷಣವೂ ಸೂಚನೆ ನೀಡಲು ಹಾಗೂ ಕಟ್ಟುನಿಟ್ಟಿನ ನಿಗಾ ಇಡಲು ಮಕ್ಕಳು ಬಂಧಿತ ಕಾರ್ಮಿಕರಲ್ಲ. ತಮ್ಮ ಮನಃಸ್ಥಿತಿಯನ್ನು ಮತ್ತು ಯಾವಾಗ ಏನು ಮಾಡಬೇಕೆಂಬ ಆಸಕ್ತಿಯನ್ನು ಮಕ್ಕಳು ತಾವೇ

ನಿರ್ಧರಿಸಿ ಹೊಂದಿಸಿಕೊಳ್ಳಬೇಕು ಎಂದು ಬಹುಶಃ ಅವರ ನಂಬಿಕೆ. ಅವರು ಬಹುಶಃ ಮಕ್ಕಳನ್ನು ಸ್ವಯಂ-ನಿರ್ಧಾರ ಕೈಗೊಳ್ಳಲು ಶಕ್ತರನ್ನಾಗಿ ರೂಪಿಸಲು ಬಯಸಿದ್ದಾರೆ.

**ರಾಮಸ್ವರೂಪಜೀ:** ತುಂಬಾನೇ ಸರಿಯಾಗಿದೆ ತೌಸಿಫ್ ಭಾಯ್. ಇಲ್ಲಿ ಗಿಜುಭಾಯ್ ಅವರಿಗೆ ಶಿಕ್ಷಣದ ಗುರಿ (ಆದರ್ಶ) ಮಕ್ಕಳನ್ನು ಸ್ವಾವಲಂಬಿಯಾಗಿ ಮಾಡುವುದಾಗಿದೆ. ಹೀಗಾಗಿ ಅವರು ಮಕ್ಕಳು ಹಾಗೂ ತಮ್ಮ ನಡುವಿನ ಸಂಬಂಧ ಮತ್ತು ತಮ್ಮ ಬೋಧನಾ ಪ್ರಕ್ರಿಯೆಗಳನ್ನು ಹೀಗೆ ಕಲ್ಪಿಸಿಕೊಂಡಿದ್ದಾರೆ. ಒಂದು ವೇಳೆ ಅವರ ಆದರ್ಶಗಳು ಬೇರೆಯೇ ಆಗಿದ್ದರೆ, ಈ ಸಂಬಂಧ ಮತ್ತು ಬೋಧನಾ ಪ್ರಕ್ರಿಯೆಗಳು ಕೂಡ ಬೇರೆಯೇ ಆಗಿರುತ್ತಿತ್ತು.

**ತೌಸೀಫ್:** ತುಂಬ ಸರಿಯಾಗಿದೆ... ನನಗೆ ಈಗ ಅರ್ಥವಾಯ್ತು... ವಿಷಯ ಏನೆಂದರೆ, ಶಿಕ್ಷಣಕ್ಕಾಗಿ ನಾವು ನಿಗದಿಪಡಿಸಿದ ಯಾವುದೇ ಗುರಿಗಳನ್ನು ಸಾಧಿಸಲು, ನಾವು ಅದಕ್ಕನುಗುಣವಾಗಿಯೇ ಮಕ್ಕಳೊಂದಿಗೆ ಸಂಬಂಧ, ಅವರಿಗೆ ಕಲಿಯುವ-ಕಲಿಸುವ ವಿಷಯ, ವಸ್ತು ಹಾಗೂ ಕಾರ್ಯವಿಧಾನಗಳನ್ನು ಹೊಂದಿಸಬೇಕು. ಎರಡನೆಯದಾಗಿ, ಯಾವುದೇ ಶಾಲೆಯಲ್ಲಿ ಮಕ್ಕಳೊಂದಿಗೆ ಶಿಕ್ಷಕರ ಸಂಬಂಧಗಳು ಹೇಗಿದೆ, ಅವರಿಗೆ ಏನನ್ನು ಮತ್ತು ಹೇಗೆ ಬೋಧಿಸಲಾಗುತ್ತದೆ ಇತ್ಯಾದಿ ವಿಷಯಗಳನ್ನು ನೋಡಿದಾಗಲೇ, ಶಿಕ್ಷಣದ ಯಾವ ಆದರ್ಶಗಳು ಮತ್ತು ಮೌಲ್ಯಗಳನ್ನು ಅಲ್ಲಿ ಆರಿಸಲಾಗಿದೆ ಎಂಬುದನ್ನು ಸರಿಯಾಗಿ ತರ್ಕಿಸಬಲ್ಲೆ.

**ರಾಮಸ್ವರೂಪಜೀ:** ನೀವು ಹೇಳಿದ್ದು ಸಂಪೂರ್ಣವಾಗಿ ಸರಿಯಾಗಿದೆ. ಆದ್ದರಿಂದ, ನೋಡಿ ತೌಸಿಫ್, ಕನಿಷ್ಠಪಕ್ಷ ನಾವು ಶಿಕ್ಷಣದ ಒಳ್ಳೆಯತನವನ್ನು ಪರಿಪೂರ್ಣತೆಯಲ್ಲಿ ನೋಡಲು ಈ ಕೆಲವು ಆಯಾಮಗಳು ಅಥವಾ ವ್ಯಾಪ್ತಿ ಇರಬಹುದಾಗಿದೆ:

1. ಶಿಕ್ಷಣದ ಗುರಿ (ಆದರ್ಶ, ಮೌಲ್ಯ), 2. ಶೈಕ್ಷಣಿಕ ಫಲಿತಾಂಶ, 3. ಶೈಕ್ಷಣಿಕ ಕಾರ್ಯವಿಧಾನಗಳು

ಒಂದು ಉದಾಹರಣೆಯ ಮೂಲಕ ನಾವದನ್ನು ಅರ್ಥೈಸಿಕೊಳ್ಳೋಣ. ಒಂದು ವೇಳೆ ನಿಮಗೆ ನಿಮ್ಮ ಮಗನಿಗಾಗಿ ಒಳ್ಳೆಯ ಶಿಕ್ಷಣವನ್ನು ನೀಡುವ ಶಾಲೆಯನ್ನು ಆಯ್ಕೆ ಮಾಡಬೇಕಾದರೆ ನೀವು ಈ ಕೋಷ್ಟಕದಲ್ಲಿ ಯಾವ ಮಾನದಂಡವನ್ನು ಹಾಕಲು ಬಯಸುವಿರಿ?

---

ಬಾಕ್ಸ್ ಐಟಂ

| ಕ್ರ.ಸಂ. | ಶಿಕ್ಷಣದ ಒಳ್ಳೆಯತನದ ವ್ಯಾಪ್ತಿ | ಒಳ್ಳೆಯತನದ ವ್ಯಾಪ್ತಿಯೊಳಗಿನ ಮಾನದಂಡ (ಉದಾಹರಣೆ) |
|---|---|---|
| 1. | ಶಿಕ್ಷಣದ ಆದರ್ಶ ಅಥವಾ ಮೌಲ್ಯ | |
| 2. | ಶೈಕ್ಷಣಿಕ ಫಲಿತಾಂಶ | |
| 3. | ಶೈಕ್ಷಣಿಕ ಕಾರ್ಯವಿಧಾನಗಳು | |

---

**ತೌಸೀಫ್:** ನೀವು ಕೂಡ ನನಗೆ ಸ್ವಲ್ಪ ಸಹಾಯ ಮಾಡಬೇಕಾಗುತ್ತದೆ. ಎರಡನೆಯದಾಗಿ ಈ ಕೋಷ್ಟಕವನ್ನು ನಾನು ಈ ರೀತಿಯಾಗಿ ರಚಿಸಲು ಬಯಸುವುದಿಲ್ಲ. ಏಕೆಂದರೆ ಈ ವಿಷಯಗಳು ಒಂದು ಇನ್ನೊಂದನ್ನು ನಿರ್ಧರಿಸುತ್ತದೆ ಎನ್ನುವುದನ್ನು ನಾನು ಈವರೆಗಿನ ನಮ್ಮ ಮಾತುಕತೆಯಲ್ಲಿ ಅರ್ಥ ಮಾಡಿಕೊಂಡಿರುವುದರಿಂದ, ಅದಕ್ಕಾಗಿ ನಾನು ಈ ರೀತಿಯಲ್ಲಿ ಚೌಕಟ್ಟನ್ನು ರಚಿಸಲು ಬಯಸುತ್ತೇನೆ:

---

ಬಾಕ್ಸ್ ಐಟಂ

| ಶಿಕ್ಷಣದ ಒಳ್ಳೆಯತನದ ವ್ಯಾಪ್ತಿ | ಶಿಕ್ಷಣದ ಆದರ್ಶ ಅಥವಾ ಮೌಲ್ಯ | ಶೈಕ್ಷಣಿಕ ಫಲಿತಾಂಶ | ಶೈಕ್ಷಣಿಕ ಕಾರ್ಯವಿಧಾನಗಳು |
|---|---|---|---|
| | | | |
| | | | |
| | | | |

--------------------------------------------------------------------------------------------------------------------------------------------

ಇಲ್ಲಿರುವ ಈ ಬಾಣಗಳು ಒಂದು ವಲಯವು ಇನ್ನೊಂದನ್ನು ನಿರ್ಧರಿಸುತ್ತಿದೆ ಎನ್ನುವುದನ್ನು ತೋರಿಸುತ್ತದೆ. ಎಲ್ಲಕ್ಕಿಂತ ಮೊದಲು ನಾನೀಗ ನನ್ನ ಮಗನಿಗಾಗಿ ಯಾವ ರೀತಿಯ ಶಿಕ್ಷಣದ ಪರಿಕಲ್ಪನೆಯನ್ನು ಮಾಡುತ್ತಿದ್ದೇನೆ ಎನ್ನುವುದನ್ನು ವಿವರಿಸುತ್ತೇನೆ. ಅಂದರೆ, ಶಿಕ್ಷಣದಲ್ಲಿ ಯಾವ ಆದರ್ಶ ಹಾಗೂ ಮೌಲ್ಯವು ಸೂಕ್ತ ಎಂದು ನಾನು ಪರಿಗಣಿಸಿಕೊಂಡಿದ್ದೇನೆ, ನನ್ನ ಮಗನು ಬೆಳೆದು ದೊಡ್ಡವನಾದ ಮೇಲೆ ಒಬ್ಬ ಸುಸಂಸ್ಕೃತ ವ್ಯಕ್ತಿಯಾಗುವಂಥ ಶಿಕ್ಷಣವನ್ನು ಪಡೆಯಬೇಕೆಂದು ನಾನು ನಂಬುತ್ತೇನೆ. ಧರ್ಮ, ಜಾತಿ ಇಲ್ಲವೇ ಹಣದ ಹೆಸರಿನಲ್ಲಿ ಅಥವಾ ಸ್ಥಾನಮಾನದ ಆಧಾರದಲ್ಲಿ ಜನರೊಂದಿಗೆ ಸಂಬಂಧ ಮಾಡಬಾರದು, ಬದಲಿಗೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು, ಜನರಿಗೆ ಸಹಾಯ ಮಾಡಬೇಕು, ಒಳ್ಳೆಯದನ್ನು ಒಳ್ಳೆಯದು, ಕೆಟ್ಟದ್ದನ್ನು ಕೆಟ್ಟದ್ದೆಂದು ಹೇಳಲು ಅವನು ಧೈರ್ಯವನ್ನು ಹೊಂದಬೇಕು, ಅವನು ಸ್ವಾವಲಂಬಿಯಾಗಬೇಕು, ಯಾರದ್ದೇ ಆದರೂ ಆಕರ್ಷಣೆಯಾಗಬೇಕು. ಅವನು ತನಗಾಗಿ ಹಾಗೂ ಇತರರಿಗಾಗಿ ಸಂತೋಷವನ್ನು ಕಂಡುಕೊಳ್ಳಬೇಕು, ಇತರರಿಗಾಗಿ ಜೀವನ ನಡೆಸಬೇಕು, ಯಾರಿಂದಲೂ ದಾರಿ ತಪ್ಪದಂತಿರಬೇಕು, ತನ್ನ ತಿಳಿವಳಿಕೆ ಮತ್ತು ಎಚ್ಚರಿಕೆಯಿಂದ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ಧರಿಸುವಂತಿರಬೇಕು.

**ರಾಮಸ್ವರೂಪಜೀ:** ಸರಿಯಾಗಿ ಹೇಳಿದ್ದೀರಿ ತೌಸೀಫ್ ಭಾಯ್. ಅಂದರೆ, ನಿಮ್ಮ ಮನಸ್ಸಿನಲ್ಲಿರುವ ಶಿಕ್ಷಣದ ಆದರ್ಶಗಳು ಮತ್ತು ಮೌಲ್ಯಗಳು ಸಮಾನತೆ, ನ್ಯಾಯ, ಸಂವೇದನಾಶೀಲತೆ, ವೈಚಾರಿಕತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಕಾಳಜಿ ಇತ್ಯಾದಿಗಳಾಗಿವೆ ಎಂದು ನಾವೀಗ ಹೇಳಬಹುದಾಗಿದೆ.

**ತೌಸೀಫ್:** ನೀವು ತುಂಬ ಸರಿಯಾಗಿ ಹೇಳಿದಿರಿ. ಈಗ ಈ ಕೋಷ್ಟಕದಲ್ಲಿ ನಾವು ಹೀಗೆ ಬರೆಯಬಹುದು.

--------------------------------------------------------------------------------------------------------------------------------------------

ಬಾಕ್ಸ್ ಐಟಂ

| ಶಿಕ್ಷಣದ ಒಳ್ಳೆಯತನದ ವ್ಯಾಪ್ತಿ | ಶಿಕ್ಷಣದ ಆದರ್ಶ ಅಥವಾ ಮೌಲ್ಯ | ಶೈಕ್ಷಣಿಕ ಫಲಿತಾಂಶ | ಶೈಕ್ಷಣಿಕ ಕಾರ್ಯವಿಧಾನಗಳು |
|---|---|---|---|
| | ಸಮಾನತೆ, ನ್ಯಾಯ, ಸಂವೇದನಾಶೀಲತೆ, ವೈಚಾರಿಕತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಕಾಳಜಿ | | |

--------------------------------------------------------------------------------------------------------------------------------------------

ಒಂದು ವೇಳೆ ಈಗ ನಾವು ಶಿಕ್ಷಣದ ಈ ಆದರ್ಶಗಳು ಮತ್ತು ಮೌಲ್ಯಗಳನ್ನು ನಿರ್ಣಯಿಸಲು ಬಯಸಿದರೆ, ಈಗ ನಾವು ಯಾವ ಜ್ಞಾನ, ಮೌಲ್ಯ, ವರ್ತನೆ, ಕೌಶಲ್ಯ, ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಅದರಲ್ಲಿ ಬೆಳೆಸಿಕೊಳ್ಳಬೇಕು ಹಾಗೂ ಅವನ್ನು ಎಷ್ಟರಮಟ್ಟಿಗೆ ಬೆಳೆಸಿಕೊಳ್ಳಬೇಕು ಎಂಬುದರ ಬಗ್ಗೆ ಯೋಚಿಸಬೇಕು. ಈ ರೀತಿಯ ಶಿಕ್ಷಣವನ್ನು ಪೂರ್ಣಗೊಳಿಸುವಾಗ, ನನ್ನ ಮಗ ಅದನ್ನೆಲ್ಲ ಸಾಧಿಸಿದ್ದಾನೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಬಹುದಾದ ಕೆಲವು ಮಾನದಂಡಗಳು ನಮ್ಮ ಬಳಿ ಇರಬೇಕಲ್ಲವೇ?

i. **ಕಲಿಕೆಯ ವ್ಯಾಪಕತೆ:** ಒಂದು ವೇಳೆ ನಾನು ನನ್ನ ಮಗ ಆರ್ಥಿಕವಾಗಿ ಸ್ವಾವಲಂಬಿ, ವಿವೇಚನಾಶೀಲ, ನ್ಯಾಯಪ್ರಿಯ, ಸಂವೇದನಾಶೀಲನಾಗಿರಬೇಕೆಂದು ಬಯಸಿದರೆ, ಅದಕ್ಕಾಗಿ ಅವನು ಬಹಳ ವಿಶಾಲ ಸ್ತರದಲ್ಲಿ ಕಲಿಯುವುದು ಮುಖ್ಯವಾಗುತ್ತದೆ. ಜ್ಞಾನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೆಲವು ಮೂಲಭೂತ ತಿಳಿವಳಿಕೆಯನ್ನು ಹೊಂದಲು ಅವನು ಅವಕಾಶವನ್ನು ಪಡೆಯಬೇಕು. ಏಕೆಂದರೆ, ಇದರಿಂದಾಗಿ ಅವನು ಮುಂದೆ ಪ್ರಗತಿಶೀಲ ತಿಳಿವಳಿಕೆಯನ್ನು ಬೆಳೆಸಿಕೊಳ್ಳಲು ಕೆಲವು ಮೂಲಭೂತ ಸಿದ್ಧತೆಗಳನ್ನು ಹೊಂದಬಹುದಾಗಿದೆ. ವಿಜ್ಞಾನ, ಸಮಾಜ ವಿಜ್ಞಾನ, ಸಂಗೀತ, ಕಲೆ, ತರ್ಕಶಾಸ್ತ್ರ, ಇತಿಹಾಸ, ಕ್ರೀಡೆ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಮೂಲಭೂತ ಜ್ಞಾನವನ್ನು ಅವನು ಹೊಂದಲು ಸಾಧ್ಯವಾದರೆ, ಅವನು ತನ್ನ ಜೀವನದ ಪ್ರತಿಯೊಂದು ಅಂಶಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಜೀವನವನ್ನು ಉತ್ತಮವಾಗಿ ಬಾಳಲು ಇದರಿಂದ ನೆರವಾಗಬಹುದು. ಅದಕ್ಕಾಗಿ ಅವನಿಗೆ ಈ ಕ್ಷೇತ್ರಗಳ ತತ್ವಗಳು, ಮಾಹಿತಿಗಳು, ಪರಿಕಲ್ಪನೆಗಳನ್ನು ಕಲಿಯಬೇಕಾಗುತ್ತದೆ.

ii. **ಕಲಿಕೆಯಲ್ಲಿ ಸ್ಪಷ್ಟತೆ ಮತ್ತು ಆಳ:** ಹಾಗೂ ಇದನ್ನೆಲ್ಲ ಕಲಿಯುವುದು ಯಾವುದೇ ಆತುರ ಅಥವಾ ಸಾರಹೀನವಾಗಿರುವುದಿಲ್ಲ. ಅವನು ಪ್ರತಿಯೊಂದನ್ನೂ ಅರ್ಥಮಾಡಿಕೊಂಡು ಮತ್ತು ಆಳವಾಗಿ, ಅಲ್ಲದೆ ಕೊನೆಗೆ ಯಾವುದೇ ವಿಷಯಗಳ ಅರ್ಥವೇನು ಎಂಬುದನ್ನು ಕಲಿಯಬೇಕಾಗುತ್ತದೆ. ಅವನಿಗೆ ಪರಿಕಲ್ಪನೆಗಳ ತಿಳಿವಳಿಕೆ ಇರಬೇಕು, ಸಿದ್ಧಾಂತಗಳ ನಡುವಿನ ಪರಸ್ಪರ ಸಂಬಂಧವು ಗೊತ್ತಿರಬೇಕು; ಜೀವನದೊಂದಿಗೆ ಅವುಗಳ ಸಂಬಂಧವೇನೆಂದು ಅರಿಯಬೇಕು; ಅವುಗಳನ್ನು ಬಳಸಿ ಜೀವನದಲ್ಲಿ ಯಾವ ರೀತಿಯ ನಿರ್ಧಾರಗಳನ್ನು ಅಥವಾ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ತಿಳಿವಳಿಕೆ ಇರಬೇಕು; ಈ ಸಿದ್ಧಾಂತಗಳಲ್ಲಿನ ದೋಷಗಳೇನು, ಅವುಗಳ ವಿಮರ್ಶೆಗಳೇನು ಎಂಬ ಬಗ್ಗೆ ಎಚ್ಚರಿಕೆ ಇರಬೇಕು. ಆಗ ಮಾತ್ರ ಈ ಕಲಿಯುವಿಕೆಯಿಂದ ಜೀವನಕ್ಕೆ ಪ್ರಯೋಜನವಾಗುತ್ತದೆ.

iii. **ಸ್ವತಃ ಕಲಿಯುವ ಮತ್ತು ತಿಳಿಯುವ ಸಾಮರ್ಥ್ಯ:** ಪ್ರಾಯಶಃ ಈ ಎಲ್ಲಾ ಪರಿಕಲ್ಪನೆಗಳು, ಮಾಹಿತಿಗಳು, ನಿಯಮಗಳು, ಕಾನೂನುಗಳು, ಸಿದ್ಧಾಂತಗಳನ್ನು ಕೇವಲ ಕಲಿತರಷ್ಟೇ ಸಾಕಾಗುವುದಿಲ್ಲ. ಬದಲಿಗೆ, ಅವನು ಇದನ್ನೆಲ್ಲಾ ಭವಿಷ್ಯದಲ್ಲಿ ಸ್ವತಃ ಹೇಗೆ ಮಾಡಬಹುದು ಎಂಬುದನ್ನು ಕೂಡ ಕಲಿಯಬೇಕಾಗುತ್ತದೆ. ಆದ್ದರಿಂದ ಅವನು ಯಾವಾಗಲೂ ಏನನ್ನಾದರೂ ಕಲಿಯಲು ಇನ್ನೊಬ್ಬರ ಮುಖದೆಡೆಗೆ ನೋಡುತ್ತಲೇ ಇರಬೇಕಾಗಿರುವುದಿಲ್ಲ. ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಜೀವನದುದ್ದಕ್ಕೂ ಇರುವಂಥದ್ದಲ್ಲ. ಪ್ರಾಯೋಗಿಕ ಜೀವನದಲ್ಲಿ, ಬದುಕು ದಿನನಿತ್ಯವೂ ಹೊಸ ವಿಷಯಗಳನ್ನು ಮತ್ತು ಸವಾಲುಗಳನ್ನು ತಂದಿಡುತ್ತದೆ. ನೀವು ಅವೆಲ್ಲವನ್ನೂ ಪರಿಹರಿಸಲು ಬಯಸುವುದಾದರೆ, ನೀವು ನಿಮ್ಮ ಸ್ವಂತ ಕಲಿಕೆಯನ್ನೇ ನೆಚ್ಚಿಕೊಂಡು ಮುಂದುವರಿಯಬೇಕಾಗುತ್ತದೆ.

iv. **ಕಲಿಕೆಯೆಡೆಗಿನ ಮನೋಭಾವ:** ಇದಕ್ಕಾಗಿ ನನ್ನ ಮಗನು ಕಲಿಕೆಯ ಕಡೆಗೆ ವಿಶೇಷ ಮನೋಭಾವವನ್ನು ತನ್ನ ವ್ಯಕ್ತಿತ್ವದಲ್ಲೇ ಬೆಳೆಸಿಕೊಳ್ಳಬೇಕಾಗುತ್ತದೆ. ಆತ ತನ್ನ ಜ್ಞಾನ ಮತ್ತು ಅದರ ಇತಿಮಿತಿಗಳ ಬಗ್ಗೆ ಪ್ರಾಮಾಣಿಕವಾಗಿ ಯೋಚಿಸುವಂತಿರಬೇಕು, ಜ್ಞಾನಸೃಷ್ಟಿಯ ಕಾರ್ಯವಿಧಾನಗಳನ್ನು ಪ್ರಾಮಾಣಿಕವಾಗಿ ಪೂರ್ಣಗೊಳಿಸುವಂತಿರಬೇಕು, ಆತ್ಮವಿಶ್ವಾಸವನ್ನು ಹೊಂದಿರಬೇಕು, ಕಲಿಯುವ ಹಂಬಲವಿರಬೇಕು, ಜ್ಞಾನದ ಬಗ್ಗೆ ಗೌರವ ಹಾಗೂ ಆದರ ಇರಬೇಕು.

v. **ಸಂವೇದನಾಶೀಲತೆ ಮತ್ತು ಮೌಲ್ಯಗಳು:** ತನ್ನ ಬಗ್ಗೆ ಆತ್ಮಗೌರವ, ಇತರರ ಬಗ್ಗೆ ಗೌರವ, ಸಹಕಾರದ ಭಾವನೆ, ನ್ಯಾಯ ಪ್ರಜ್ಞೆಯಂತಹ ಮೌಲ್ಯಗಳು ಅದರಲ್ಲಿರಬೇಕು.

---

ಬಾಕ್ಸ್ ಐಟಂ

| ಶಿಕ್ಷಣದ ಒಳ್ಳೆಯತನದ ವ್ಯಾಪ್ತಿ | ಶಿಕ್ಷಣದ ಆದರ್ಶ ಅಥವಾ ಮೌಲ್ಯ | ಶೈಕ್ಷಣಿಕ ಫಲಿತಾಂಶ | ಶೈಕ್ಷಣಿಕ ಕಾರ್ಯವಿಧಾನಗಳು |
|---|---|---|---|
| | ಸಮಾನತೆ, ನ್ಯಾಯ, ಸಂವೇದನಾಶೀಲತೆ, ವೈಚಾರಿಕತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಕಾಳಜಿ | i. **ಕಲಿಕೆಯ ವ್ಯಾಪಕತೆ:** ಜ್ಞಾನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನವನ್ನು ಹೊಂದಲು ಅವನು ಅವಕಾಶವನ್ನು ಪಡೆಯಬೇಕು. ಅದಕ್ಕಾಗಿ ಆ ಕ್ಷೇತ್ರಗಳ ತತ್ವಗಳು, ಮಾಹಿತಿಗಳು, ಪರಿಕಲ್ಪನೆಗಳನ್ನು ಕಲಿಯಬೇಕಾಗುತ್ತದೆ.<br>ii. **ಕಲಿಕೆಯಲ್ಲಿ ಸ್ಪಷ್ಟತೆ ಮತ್ತು ಆಳ:** ಯಾವುದೇ ವಿಷಯಗಳ ಅರ್ಥವೇನು? ಪರಿಕಲ್ಪನೆಗಳ ತಿಳಿವಳಿಕೆ ಇರಬೇಕು, ಸಿದ್ಧಾಂತಗಳ ನಡುವಿನ ಪರಸ್ಪರ ಸಂಬಂಧವು ಗೊತ್ತಿರಬೇಕು; ಜೀವನದೊಂದಿಗೆ ಅವುಗಳ ಸಂಬಂಧವೇನೆಂದು ಅರಿಯಬೇಕು.<br>iii. **ಸ್ವತಃ ಕಲಿಯುವ ಮತ್ತು ತಿಳಿಯುವ ಸಾಮರ್ಥ್ಯ:** | |

| | | | |
|---|---|---|---|
| | | ದಿನನಿತ್ಯದ ಜೀವನದಲ್ಲಿ ಸವಾಲುಗಳನ್ನು ಪರಿಹರಿಸಬೇಕು; ಕಲಿತ ಸಿದ್ಧಾಂತಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು, ನಿರಂತರವಾಗಿ ಸ್ವತಃ ಕಲಿಯುವುದನ್ನು ಮುಂದುವರಿಸಬೇಕು.<br>iv. **ಕಲಿಕೆಯೆಡಗಿನ ಮನೋಭಾವ :** ಜ್ಞಾನಸೃಷ್ಟಿಯ ಕಾರ್ಯವಿಧಾನಗಳನ್ನು ಪ್ರಾಮಾಣಿಕವಾಗಿ ಪೂರ್ಣಗೊಳಿಸಬೇಕು, ಆತ್ಮವಿಶ್ವಾಸವನ್ನು ಹೊಂದಿರಬೇಕು, ಕಲಿಯುವ ಹಂಬಲವಿರಬೇಕು, ಜ್ಞಾನದ ಬಗ್ಗೆ ಗೌರವ ಹಾಗೂ ಆದರ ಇರಬೇಕು.<br>v. **ಸಂವೇದನಾಶೀಲತೆ ಮತ್ತು ಮೌಲ್ಯಗಳು:** ತನ್ನ ಬಗ್ಗೆ ಆತ್ಮಗೌರವ, ಇತರರ ಬಗ್ಗೆ ಗೌರವ, ಸಹಕಾರದ ಭಾವನೆ, ನ್ಯಾಯ ಪ್ರಜ್ಞೆಯಂತಹ ಮೌಲ್ಯಗಳು ಅದರಲ್ಲಿರಬೇಕು. | |

----------------------------------------------------------------------------------------------------------------------------------------------------
-

**ರಾಮಸ್ವರೂಪಜೀ:** ತುಂಬಾನೇ ಚೆನ್ನಾಗಿದೆ ತೌಸೀಫ್, ಈ ಬಗ್ಗೆ ತುಂಬಾ ಆಳವಾಗಿ ನಿಮ್ಮ ಅಭಿಪ್ರಾಯವನ್ನು ನೀಡಿದ್ದೀರಿ. ಈಗ ಅದನ್ನೆಲ್ಲ ಈ ಕೋಷ್ಟಕದಲ್ಲಿ ಸಂಕ್ಷಿಪ್ತ ರೂಪದಲ್ಲಿ ಇರಿಸೋಣ:

**ತೌಸೀಫ್:** ನಿಜ, ಈಗ ಕೊನೆಯ ಅಂಶವಷ್ಟೇ ಉಳಿದಿದೆ, ಇವೆಲ್ಲವೂ ಆದರ್ಶ, ಮೌಲ್ಯಗಳಾಗಿದ್ದರೆ ಹಾಗೂ ಈ ಫಲಿತಾಂಶವನ್ನು ನಾವು ಪಡೆಯಲು ಬಯಸುವುದಾದರೆ ಶೈಕ್ಷಣಿಕ ಕಾರ್ಯವಿಧಾನಗಳು ಏನಾಗುತ್ತವೆ? ನಾನು ಅರ್ಥೈಸಿಕೊಂಡಂತೆ, ನಾವು ಕಾರ್ಯವಿಧಾನಗಳ ಸ್ವರೂಪವನ್ನು ನಮ್ಮ ಗುರಿಗಳಿಗೆ ತಕ್ಕಂತೆ ಇಟ್ಟುಕೊಳ್ಳಬೇಕಾಗುತ್ತದೆ. ಯಾರನ್ನಾದರೂ ಸಂವೇದನಾಶೀಲ, ವಿವೇಚನಾಶೀಲ, ಸ್ವಾವಲಂಬಿಗಳನ್ನಾಗಿ ಮಾಡುವುದೇ ನಮ್ಮ ಗುರಿಯಾಗಿದ್ದರೆ, ಮಕ್ಕಳನ್ನು ಗದರಿಸುವ, ಬೆದರಿಸುವಂತಹ ಪರಿಸರವಿರುವ ಯಾವುದೇ ಸ್ಥಳದಲ್ಲಿ ಅದು ಸಾಧ್ಯವಾಗುವುದಿಲ್ಲ; ಏನನ್ನಾದರೂ ಸ್ವತಃ ಮಾಡಲು, ಯೋಚಿಸಲು, ವಿಚಾರ ಮಾಡಲು ಅವಕಾಶವಿರದ ವಾತಾವರಣದಲ್ಲಿ ಕೂಡ ಅದು ಸಾಧ್ಯವಾಗುವುದಿಲ್ಲ. ಹೀಗಾಗಿ ಈ ಕೆಳಗಿನ ಕಾರ್ಯವಿಧಾನಗಳನ್ನು ಅಳವಡಿಸಿಕೊಂಡರೆ, ಬಹುಶಃ ಅದು ಸಾಧ್ಯವಾದೀತು ಎಂದು ನಾನು ಆಶಿಸುತ್ತೇನೆ:

i. **ಅತ್ಯುತ್ತಮ ಬೋಧನೆಯ ಶಕ್ತಿ:** ಒಂದು ವೇಳೆ ನಾವು ನಮ್ಮ ಮಕ್ಕಳು ವ್ಯಾಪಕವಾಗಿ ಕಲಿಯುವುದನ್ನು ಹಾಗೂ ಅರ್ಥೈಸಿಕೊಳ್ಳುವುದನ್ನು ಬಯಸಿದರೆ, ಅವರ ಶಿಕ್ಷಕರು ಸಹ ವ್ಯಾಪಕವಾದ ಜ್ಞಾನವನ್ನು ಹೊಂದಿದ್ದರೆ ಹಾಗೂ ನಿರಂತರವಾದ ಕಲಿಕೆಗೆ ಮಹತ್ವವನ್ನು ನೀಡಿದರೆ ಮಾತ್ರ ಅದು ಸಾಧ್ಯವಾಗುತ್ತದೆ; ಅಲ್ಲದೆ ಅವರು ಸ್ವತಃ ನಿರಂತರವಾಗಿ ಕಲಿಯುತ್ತಿರಬೇಕು.

ii. **ನೈತಿಕ ಔಚಿತ್ಯ:** ಬೋಧನಾ ಕಾರ್ಯವಿಧಾನಗಳು ನೈತಿಕವಾಗಿ ಸಮರ್ಥನೀಯವೂ, ನ್ಯಾಯಯುತವೂ ಆಗಿರಬೇಕು. ಮಕ್ಕಳಿಗೆ ಅವರ ಮಟ್ಟಕ್ಕೆ ಅನುಗುಣವಾಗಿ ಸಹಾಯ ಮಾಡಬೇಕು; ಗದರಿಕೆ, ಶಿಕ್ಷೆಗಳ ಬಳಕೆ ಮಾಡಬಾರದು; ಪಕ್ಷಪಾತ ಮಾಡಬಾರದು; ಯಾವುದೇ ಮಗುವನ್ನು ದಡ್ಡರಂತೆ ಬಿಂಬಿಸುವುದು ಇತ್ಯಾದಿಗಳನ್ನು ಮಾಡಬಾರದು.

iii. **ಮಕ್ಕಳೊಂದಿಗಿನ ಸಂಬಂಧ:** ಅವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು, ಅವರೊಂದಿಗೆ ಸಮಾನ ಸಂಬಂಧವನ್ನು ಹೊಂದಬೇಕು, ಮಕ್ಕಳಿಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸುವ ಸಲುವಾಗಿ ಶಿಕ್ಷಣವನ್ನು ಆಸಕ್ತಿದಾಯಕವಾಗಿಸಬೇಕು.

iv. **ಕಡಿಮೆ ವೆಚ್ಚದಾಯಕ:** ಬೋಧನಾ ಕಾರ್ಯವಿಧಾನಗಳು ಅಗ್ಗವಾಗುವಂತೆ ಇರಬೇಕು. ಅವು ಕೇವಲ ಆರ್ಥಿಕವಾಗಿ ಮಾತ್ರವಲ್ಲದೆ ಕಡಿಮೆ ಸಮಯ ಮತ್ತು ಶಕ್ತಿಯನ್ನು ಬಳಸುವಂತಿರಬೇಕು. ಇದರಿಂದಾಗಿ ಮಕ್ಕಳು ಮತ್ತು ಶಿಕ್ಷಕರ ಸಮಯ ಮತ್ತು ಶಕ್ತಿಯೂ ಉಳಿತಾಯವಾಗುವಂತಾಗಬೇಕು.

----------------------------------------------------------------------------------------------------------------------------------------------------
---

ಬಾಕ್ಸ್ ಐಟಂ

| ಶಿಕ್ಷಣದ ಒಳ್ಳೆಯತನದ ವ್ಯಾಪ್ತಿ | ಶಿಕ್ಷಣದ ಆದರ್ಶ ಅಥವಾ ಮೌಲ್ಯ | ಶೈಕ್ಷಣಿಕ ಫಲಿತಾಂಶ | ಶೈಕ್ಷಣಿಕ ಕಾರ್ಯವಿಧಾನಗಳು |
|---|---|---|---|
| | ಸಮಾನತೆ, ನ್ಯಾಯ, ಸಂವೇದನಾಶೀಲತೆ, ವೈಚಾರಿಕತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಕಾಳಜಿ | i. **ಕಲಿಕೆಯ ವ್ಯಾಪಕತೆ:** ಜ್ಞಾನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನವನ್ನು ಹೊಂದಲು ಅವನು ಅವಕಾಶವನ್ನು ಪಡೆಯಬೇಕು. ಅದಕ್ಕಾಗಿ ಆ ಕ್ಷೇತ್ರಗಳ ತತ್ವಗಳು, ಮಾಹಿತಿಗಳು, ಪರಿಕಲ್ಪನೆಗಳನ್ನು ಕಲಿಯಬೇಕಾಗುತ್ತದೆ.<br>ii. **ಕಲಿಕೆಯಲ್ಲಿ ಸ್ಪಷ್ಟತೆ ಮತ್ತು ಆಳ:** ಯಾವುದೇ ವಿಷಯಗಳ ಅರ್ಥವೇನು? ಪರಿಕಲ್ಪನೆಗಳ ತಿಳಿವಳಿಕೆ ಇರಬೇಕು, ಸಿದ್ಧಾಂತಗಳ ನಡುವಿನ ಪರಸ್ಪರ ಸಂಬಂಧವು ಗೊತ್ತಿರಬೇಕು; ಜೀವನದೊಂದಿಗೆ ಅವುಗಳ ಸಂಬಂಧವೇನೆಂದು ಅರಿಯಬೇಕು.<br>iii. **ಸ್ವತಃ ಕಲಿಯುವ ಮತ್ತು ತಿಳಿಯುವ ಸಾಮರ್ಥ್ಯ:** ದಿನನಿತ್ಯದ ಜೀವನದಲ್ಲಿ ಸವಾಲುಗಳನ್ನು ಪರಿಹರಿಸಬೇಕು; ಕಲಿತ ಸಿದ್ಧಾಂತಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು, ನಿರಂತರವಾಗಿ ಸ್ವತಃ ಕಲಿಕೆಯುವುದನ್ನು ಮುಂದುವರಿಸಬೇಕು.<br>iv. **ಕಲಿಕೆಯೆಡಗಿನ ಮನೋಭಾವ :** ಜ್ಞಾನಸೃಷ್ಟಿಯ ಕಾರ್ಯವಿಧಾನಗಳನ್ನು ಪ್ರಾಮಾಣಿಕವಾಗಿ ಪೂರ್ಣಗೊಳಿಸಬೇಕು, ಆತ್ಮವಿಶ್ವಾಸವನ್ನು ಹೊಂದಿರಬೇಕು, ಕಲಿಯುವ ಹಂಬಲವಿರಬೇಕು, ಜ್ಞಾನದ ಬಗ್ಗೆ ಗೌರವ ಹಾಗೂ ಆದರ ಇರಬೇಕು.<br>v. **ಸಂವೇದನಾಶೀಲತೆ ಮತ್ತು** | i. **ಅತ್ಯುತ್ತಮ ಬೋಧನೆಯ ಶಕ್ತಿ:** ಶಿಕ್ಷಕರು ಕೂಡ ವ್ಯಾಪಕವಾದ ಜ್ಞಾನವನ್ನು ಹೊಂದಿರಬೇಕು. ನಿರಂತರವಾದ ಕಲಿಕೆಗೆ ಮಹತ್ವವನ್ನು ನೀಡಬೇಕು; ಸ್ವತಃ ನಿರಂತರವಾಗಿ ಕಲಿಯುತ್ತಿರಬೇಕು<br>ii. **ನೈತಿಕ ಔಚಿತ್ಯ:** ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಸಹಾಯ ಮಾಡಬೇಕು; ಗದರಿಕೆ, ಶಿಕ್ಷೆಗಳ ಬಳಕೆ ಮಾಡಬಾರದು; ಪಕ್ಷಪಾತ ಮಾಡಬಾರದು; ಯಾವುದೇ ಮಗುವನ್ನು ದಡ್ಡರಂತೆ ಬಿಂಬಿಸುವುದು ಇತ್ಯಾದಿಗಳನ್ನು ಮಾಡಬಾರದು.<br>iii. **ಮಕ್ಕಳೊಂದಿಗಿನ ಸಂಬಂಧ:** ಅವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು, ಅವರೊಂದಿಗೆ ಸಮಾನ ಸಂಬಂಧವನ್ನು ಹೊಂದಬೇಕು, ಮಕ್ಕಳಿಗೆ ಕಲಿಕೆಯನ್ನು ಆಸಕ್ತಿದಾಯಕವಾಗಿಸಬೇಕು.<br>iv. **ಕಡಿಮೆ ವೆಚ್ಚದಾಯಕ:** ಕೇವಲ ಆರ್ಥಿಕವಾಗಿ ಮಾತ್ರ ಅಗ್ಗವಾಗಿರುವುದಲ್ಲ, ಜೊತೆಗೆ ಕಡಿಮೆ ಸಮಯ ಮತ್ತು ಶಕ್ತಿಯನ್ನು ಬಳಸುವಂತಿರಬೇಕು. |

| | | | |
|---|---|---|---|
| | | **ಮೌಲ್ಯಗಳು:** ತನ್ನ ಬಗ್ಗೆ ಆತ್ಮಗೌರವ, ಇತರರ ಬಗ್ಗೆ ಗೌರವ, ಸಹಕಾರದ ಭಾವನೆ, ನ್ಯಾಯ ಪ್ರಜ್ಞೆಯಂತಹ ಮೌಲ್ಯಗಳು ಅದರಲ್ಲಿರಬೇಕು. | |

-----------------------------------------------------------------------------------------------------------------------------------------

**ರಾಮಸ್ವರೂಪಜೀ:** ಬಹಳ ಚೆನ್ನಾಗಿದೆ ತೌಸೀಫ್, ನೀವು ಅದ್ಭುತ ಕೆಲಸವನ್ನೇ ಮಾಡಿದಿರಿ. ಈಗ ನಾವು ಈ ಅಂಶಗಳನ್ನು ಕೂಡ ಕೋಷ್ಟಕದಲ್ಲಿ ಸೇರಿಸೋಣ:

ಈಗ ನೋಡಿ, ಈ ಕೋಷ್ಟಕ ಸಿದ್ಧವಾಯಿತು. ಈಗ ಇದು ನಿಮ್ಮ ಮಗನಿಗೆ ಒಳ್ಳೆಯ ಶಿಕ್ಷಣಕ್ಕೆ ಪೂರಕವಾದ ಚೌಕಟ್ಟಿನಂತಿದೆ. ಈಗ ಇದು ನಿಮಗೆ ಯಾವ ಶಿಕ್ಷಣ 'ಒಳ್ಳೆಯ ಶಿಕ್ಷಣ'ವಾಗಿದೆ ಹಾಗೂ ಯಾವ ಶಾಲೆಯು 'ಒಳ್ಳೆಯ ಶಾಲೆ'ಯಾಗಿದೆ ಎಂದು ಹೇಳುತ್ತದೆ.

**ತೌಸೀಫ್:** ರಾಮಸ್ವರೂಪಜಿ ಅದ್ಭುತ! ಈಗ ಉತ್ತಮ ಶಿಕ್ಷಣವೆಂದರೆ ಏನೆಂದು ನಾನು ಅರ್ಥಮಾಡಿಕೊಂಡೆ. ಅದರ ಅರ್ಥ ಮಾತ್ರವಲ್ಲದೆ ಅದರ ಮಾನದಂಡ ಏನಾಗಿರಬೇಕು ಎನ್ನುವುದನ್ನು ಕೂಡ ತಿಳಿದುಕೊಂಡೆ. ಬಹುಶಃ ಈಗ ನಾನು ಯಾವುದೇ ಶಾಲೆಯ ಉತ್ತಮ ಮೌಲ್ಯಮಾಪನವನ್ನು ಮಾಡಬಲ್ಲೆ ಮತ್ತು ಅಲ್ಲಿ ಒಳ್ಳೆಯತನದ ಪ್ರಮಾಣವು ಯಾವ ಪರಿಯಲ್ಲಿದೆ ಎಂಬುದನ್ನು ಅರಿತುಕೊಳ್ಳಬಲ್ಲೆ. ಅದಕ್ಕಾಗಿ ನೀವು ಸಮಯ ನೀಡಿದ್ದಕ್ಕೆ ಧನ್ಯವಾದಗಳು. ಈಗ ನಾನು ಹೊರಡುತ್ತೇನೆ. ಮತ್ತೆ ಭೇಟಿಯಾಗೋಣ.

**ರಾಮಸ್ವರೂಪಜೀ:** ಆದೀತು ತೌಸಿಫ್ ಭಾಯ್. ಖಂಡಿತ ಮತ್ತೆ ಭೇಟಿಯಾಗೋಣ. ನಮಸ್ಕಾರ.

(ರಾಮಸ್ವರೂಪ್‌ಜಿ ಅವರಿಗೆ ವಿದಾಯ ಹೇಳಿದ ಬಳಿಕ ತೌಸೀಫ್ ಅವರು ಬೀದಿಯ ಕಡೆಗೆ ಹೆಜ್ಜೆಯಿಡುತ್ತಾ ತಮ್ಮ ಮನೆಯ ಕಡೆಗೆ ಹೊರಡುತ್ತಾರೆ. ಹಾಗೆ ನಡೆದುಕೊಂಡು ಹೋಗುತ್ತಿರುವಾಗ ಕೆಲವರು ಯಾವುದೋ ಶಾಲೆಯ ಜಾಹೀರಾತೊಂದನ್ನು ದೊಡ್ಡ ಫಲಕದಲ್ಲಿ ಅಂಟಿಸುತ್ತಿರುವುದನ್ನು ನೋಡುತ್ತಾರೆ. ತೌಸೀಫ್ ಅವರ ಕಣ್ಣು ಅದರ ಮೇಲೆ ಬೀಳುತ್ತದೆ. ಜಾಹೀರಾತಿನಲ್ಲಿ, "ನಮ್ಮ ಶಾಲೆಯು ವಿಶ್ವ ದರ್ಜೆಯ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತದೆ" ಎಂದು ಬರೆಯಲಾಗಿರುತ್ತದೆ. ಮತ್ತೆ ತೌಸೀಫ್ ಅವರ ಕಣ್ಣು ಅದರ ಮೂಲೆಯತ್ತ ಹೊರಳುತ್ತದೆ, "ನಮ್ಮ ಶಾಲೆಗೆ ಬಂದು ನಮ್ಮಲ್ಲಿನ ಗುಣಮಟ್ಟವನ್ನು ನೀವೇ ನೋಡಿ: ಈಜುಕೊಳ, ಕುದುರೆ ಸವಾರಿ, ಹವಾನಿಯಂತ್ರಿತ ತರಗತಿಗಳು, ಇಂಗ್ಲಿಷ್ ಮಾಧ್ಯಮ, ಅಮೇರಿಕನ್ ಕಂಪನಿ ಸಿದ್ಧಪಡಿಸಿದ ಮೈಂಡ್ ಆಕ್ಟಿವಿಟೀಸ್..." ಎಂದು ಅಲ್ಲಿ ಬರೆಯಲಾಗಿರುತ್ತದೆ. ಅದನ್ನೆಲ್ಲಾ ಓದಿದ ಬಳಿಕ ತೌಸಿಫ್ ಅವರ ಮನಸ್ಸಿನಲ್ಲಿ ಇಂದು ನಡೆದ ಸಂಗತಿಗಳೆಲ್ಲವೂ ಸಾಲುಸಾಲಾಗಿ ಹಾದುಹೋಗುತ್ತವೆ. ಹಾಗೂ ಅವರ ಮುಖದಲ್ಲಿ ಮುಗುಳ್ನಗೆಯೊಂದು ಮೂಡುತ್ತದೆ ಹಾಗೂ ಮನದಲ್ಲಿಯೇ "ಗುಣಮಟ್ಟದ ವ್ಯಾಪಾರಿಗಳು" ಎಂದು ಸಣ್ಣಗೆ ಗೊಣಗುತ್ತಾರೆ.

*****

**ಸಂದರ್ಭ:**

ಈ ಲೇಖನವು ಬಹುತೇಕ ಇಬ್ಬರು ವ್ಯಕ್ತಿಗಳ ವಿಚಾರಧಾರೆಗಳನ್ನು ಆಧರಿಸಿದೆ. ರೋಹಿತ್ ಧನಕರ್ ಮತ್ತು ಡಬ್ಲ್ಯೂ. ಎ. ಹಾರ್ಟ್ ಅವರ ಲೇಖನ **'ದಿ ಐಡಿಯಾ ಆಫ್ ಕ್ವಾಲಿಟಿ ಇನ್ ಎಜುಕೇಷನ್'** (2011, ಅಪ್ರಕಟಿತ) ಹಾಗೂ ಡಬ್ಲ್ಯೂ. ಎ. ಹಾರ್ಟ್ ಅವರ ಲೇಖನ 'ದಿ ಕ್ವಾಲಿಟಿ ಆಫ್ ಮೊಂಗರ್ಸ್' (ಜರ್ನಲ್ ಆಫ್ ಫಿಲಾಸಫಿ ಆಫ್ ಎಜುಕೇಶನ್, ಸಂಪುಟ 31, ಸಂ. 2, 1997) ಇವುಗಳಲ್ಲಿ ಪ್ರಸ್ತುತಪಡಿಸಲಾದ ಪ್ರಮುಖ ವಿಚಾರಗಳು ಮತ್ತು ಒಳನೋಟಗಳನ್ನು ಆಧರಿಸಿದೆ. ಇದರ ಶೀರ್ಷಿಕೆಯೂ ಡಬ್ಲ್ಯೂ. ಎ. ಹಾರ್ಟ್ ಅವರ ಲೇಖನದ ಶೀರ್ಷಿಕೆಯಿಂದ ಪ್ರೇರೇಪಣೆ ಪಡೆದಿದೆ. ಆದಾಗ್ಯೂ ಪರೋಕ್ಷವಾಗಿ ನೋಡಿದರೆ, "ಗುಣಮಟ್ಟ"ದ ಕುರಿತಾಗಿ ಪ್ರಕಟವಾದ ಜರ್ನಲ್ ಆಫ್ ಫಿಲಾಸಫಿ ಆಫ್ ಎಜುಕೇಷನ್‌ನ (ಸಂಪುಟ. 30, ಸಂ. 1, 1996) ವಿಶೇಷ ಸಂಚಿಕೆಯಲ್ಲಿನ ಲೇಖನಗಳಲ್ಲಿ ಪ್ರಸ್ತುತಪಡಿಸಲಾದ ವಿಚಾರಗಳನ್ನೂ ಕೂಡ ಈ ಲೇಖನವು ಪೋಷಿಸಿದೆ.

-----------------------------------------------------------------------------------------------------------------------------------------------------
--

**ಕುಲದೀಪ್ ಗರ್ಗ್** ಅವರು ಕಳೆದ 12 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಪ್ರಸ್ತುತ ಜೈಪುರದಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕಕ್ಕೆ:** kuldeep.garg@azimpremjiafoundation.org